ಸಂಪುಟ 01 | ಸಂಚಿಕೆ 184 | ಶುಕ್ರವಾರ 29 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ರಾಷ್ಟ್ರೀಯ ಕಾಗದದ ವಿಮಾನ ದಿನ**

ರಾಷ್ಟ್ರೀಯ ಕಾಗದದ ವಿಮಾನ ದಿನವು ಅನಧಿಕೃತ ಆಚ-ರಣೆಯಾಗಿದ್ದು, ಪ್ರತಿ ವರ್ಷ ಮೇ 26 ರಂದು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಸರಳವಾದ ವಾಯುಯಾನ ಆಟಿಕೆಯ ನೆನಪಿಗಾಗಿ ಆಚರಿಸಲಾಗುತ್ತದೆ. ಕಾಗದದ ವಿಮಾನ ದಿನದ ಆಚರಣೆಗಳು ಸಾಮಾನ್ಯವಾಗಿ ಸಾಮಾಜಿಕ ಕೂಟಗಳನ್ನು ಒಳಗೊಂಡಿರುತ್ತವೆ, ಅಲ್ಲಿ ಭಾಗವಹಿಸುವವರು ಕಾಗದದ ವಿಮಾನಗಳನ್ನು ರಚಿಸುತ್ತಾರೆ ಮತ್ತು ಹಾರಿಸುತ್ತಾರೆ.

**1) ಅಂತರರಾಷ್ಟ್ರೀಯ ಮೌಂಟ್ ಎವರೆಸ್ಟ್ ದಿನ**

ಪ್ರತಿ ವರ್ಷ ಮೇ 29 ರಂದು ಅಂತರರಾಷ್ಟ್ರೀಯ ಮೌಂಟ್ ಎವರೆಸ್ಟ್ ದಿನವನ್ನು ಆಚರಿಸಲಾಗುತ್ತದೆ. 1953 ರ ಇದೇ ದಿನದಂದು ನ್ಯೂಜಿಲೆಂಡ್‌ನ ಸರ್ ಎಡ್ಮಂಡ್ ಹಿಲರಿ ಮತ್ತು ನೇಪಾಳದ ತೇನ್ಸಿಂಗ್ ನಾರ್ಗೆ ಶೆರ್ಪಾ ಅವರು ಪ್ರಪಂಚದ ಅತಿ ಎತ್ತರದ ಮೌಂಟ್ ಎವರೆಸ್ಟ್ ಶಿಖರವನ್ನು ಮೊದಲು ಯಶಸ್ವಿಯಾಗಿ ಏರಿದರು.

**3) ವಿಶ್ವ ಜೀರ್ಣಾಂಗ ಆರೋಗ್ಯ ದಿನವನ್ನು**

ಐಪ್ರತಿ ವರ್ಷ ಮೇ 29 ರಂದು ವಿಶ್ವ ಜೀರ್ಣಾಂಗ ಆರೋಗ್ಯ ದಿನವನ್ನು (World Digestive Health Day) ಆಚರಿಸಲಾಗುತ್ತದೆ. ಜೀರ್ಣಾಂಗ ವ್ಯವಸ್ಥೆಯ ಮಹತ್ವ, ಕರುಳಿನ ಆರೋಗ್ಯ ಮತ್ತು ಸಂಬಂಧಿತ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ

**3) ವಿಶ್ವಸಂಸ್ಥೆಯ ಶಾಂತಿಪಾಲಕರ ಅಂತರಾಷ್ಟ್ರೀಯ ದಿನ**

ಪ್ರತಿ ವರ್ಷ ಮೇ 29 ರಂದು ವಿಶ್ವಸಂಸ್ಥೆಯ ಶಾಂತಿಪಾಲಕರ ಅಂತರಾಷ್ಟ್ರೀಯ ದಿನವನ್ನು (International Day of UN Peacekeepers) ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯ ಧ್ವಜದಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಶಾಂತಿಪಾಲಕರ ತ್ಯಾಗ, ಬಲಿದಾನ ಮತ್ತು ಸೇವೆಗೆ ಗೌರವ ಸಲ್ಲಿಸುವುದು ಹಾಗೂ ಶಾಂತಿಯ ಹಾದಿಯಲ್ಲಿ ಪ್ರಾಣತ್ಯಾಗ ಮಾಡಿದ ವೀರರನ್ನು ಸ್ಮರಿಸುವುದು ಈ ದಿನದ ಮುಖ್ಯ

## ಸುಭಾಷಿತ

ಯಶಸ್ವಿ ದಾಂಪತ್ಯಕ್ಕೆ ಶ್ರೀಮಂತಿಕೆ ಅಥವಾ ಸೌಂದರ್ಯ ಮುಖ್ಯವಾಗುವುದಿಲ್ಲ. ಇಬ್ಬರ ನಡುವಿನ ಗುಣ, ಸ್ವಭಾವಗಳ ಹೊಂದಾಣಿಕೆ

.–ಕೃಷ್ಣಮೂರ್ತಿ ಪುರಾಣಿಕ

# ‘ಕರ್ನಾಟಕ ರಾಜಕೀಯದ ಇಬ್ಬರು ಧ್ರುವತಾರೆಗಳು ಬಿ.ಎಸ್.ಯಡಿಯೂರಪ್ಪ ಮತ್ತು ಸಿದ್ದರಾಮಯ್ಯ"



ಪೀಠಿಕೆ: ಸಿದ್ಧಾಂತಗಳಲ್ಲಿ ಉತ್ತರ–ದಕ್ಷಿಣ ಧ್ರುವಗಳು ಆಗಿದ್ದರೂ, ವೈಯಕ್ತಿಕ ಸ್ನೇಹ ಮತ್ತು ರಾಜಗಾಂಭೀರ್ಯದಲ್ಲಿ ಮುತ್ಸದ್ದಿತನ ಮೆರೆದ ಇಬ್ಬರು ಸಮಬಲದ ಸಿಂಹಗಳ ಅಪರೂಪದ ಒಡನಾಟದ ವಿಶ್ಲೇಷಣೆ! ಕರ್ನಾಟಕ ರಾಜಕೀಯದ ಮಹಾಶಿಖರಗಳು: ಬಿ.ಎಸ್.ಯಡಿಯೂರಪ್ಪ ಮತ್ತು ಸಿದ್ದರಾಮಯ್ಯ. ಎರಡು ಭಿನ್ನ ಪಥಗಳ ಅದ್ಭುತ ಸಂಗಮ ಕರ್ನಾಟಕ ರಾಜಕೀಯ ಇತಿಹಾಸದ ಪುಟಗಳನ್ನು ತಿರುವಿದರೆ ಅಲ್ಲಿ ಧೀಮಂತ ವ್ಯಕ್ತಿತ್ವದ ಇಬ್ಬರು ನಾಯಕರು ಅಚಲವಾಗಿ ನಿಲ್ಲುತ್ತಾರೆ.

ಒಬ್ಬರು ದಕ್ಷಿಣ ಪಥದ ಕೇಸರಿ ಸಾಮ್ರಾಜ್ಯವನ್ನು ಕಟ್ಟಿ ಬೆಳೆಸಿದ ಅಪ್ರತಿಮ ಹೋರಾಟಗಾರ ಬಿ. ಎಸ್. ಯಡಿಯೂರಪ್ಪ ಮತ್ತೊಬ್ಬರು ಶೋಷಿತರ ಧ್ವನಿಯಾಗಿ ಮೂಡಿಬಂದ ಸಮಾಜವಾದಿ ಸಿದ್ಧಾಂತದ ಅಹಿಂದ ಸೂರ್ಯ ಸಿದ್ದರಾಮಯ್ಯ ಆಗಿದ್ದಾರೆ. ಸಿದ್ಧಾಂತಗಳಲ್ಲಿ ಉತ್ತರ ದಕ್ಷಿಣ ಧ್ರುವಗಳಾಗಿದ್ದರೂ, ಇವರಿಬ್ಬರ ನಡುವಿನ ಸೌಹಾರ್ದತೆ ಮತ್ತು ಸ್ನೇಹ ಕರ್ನಾಟಕದ ಪ್ರಜಾಪ್ರಭುತ್ವದ ಅತಿ ದೊಡ್ಡ ಸೌಂದರ್ಯವಾಗಿದೆ. ರಾಜಗಾಂಭೀರ್ಯದ ಹೋರಾಟಗಾರರು: ಇಬ್ಬರೂ ಸ್ವಯಂಭೂ ನಾಯಕರು ಇವ–ರಿಬ್ಬರೂ ರಾಜಕೀಯಕ್ಕೆ ಬಂದಿದ್ದು ಯಾವುದೇ ಗಾಡ್‌ಫಾದರ್ ಬೆಂಬಲದಿಂದಲ್ಲ ಇಬ್ಬರದ್ದೂ ತಳಮಟ್ಟದ ಹಾದಿ, ಬಿಎಸ್ವೈ ಎಂಬ ಛಲಗಾರ: ಶಿಕಾರಿಪುರದ ಬೀದಿಗಳಿಂದ ಹೋರಾಟ ಆರಂಭಿಸಿ, ರೈತರ ಪರವಾಗಿ ಬಿಸಿಲಿನಲ್ಲಿ ಪಾದಯಾತ್ರೆ ಮಾಡಿ ಪಾರ್ಟಿಯನ್ನು ಶೂನ್ಯದಿಂದ ಶಿಖರಕ್ಕೆ ಮುಟ್ಟಿಸಿದ ಧೀರ ರಾಜಾಹುಲಿ.

ಸಿದ್ದರಾಮಯ್ಯ ಎಂಬ ವಾಗ್ಮಿ: ಮೈಸೂರಿನ ಹಳ್ಳಿಯೊಂದರಿಂದ ಬಂದು, ವಕೀಲಿ ವೃತ್ತಿ ಮಾಡುತ್ತಾ ತಳಸಮುದಾಯಗಳ ಹಸಿವನ್ನು ನೀಗಿಸಲು ಹೋರಾಡಿ ಜನಮನ ಗೆದ್ದ ಸಮಾಜವಾದಿ, ಸದನದಲ್ಲಿ ಇವ–ರಿಬ್ಬರೂ ಮುಖಾಮುಖಿ ಆದರೆ ಸಾಕು ಅಲ್ಲಿ ವೈಚಾರಿಕ ತೇಜಸ್ಸು ಮಿಂಚುತ್ತಿತ್ತು. ಒಬ್ಬರು ಸಿಂಹದಂತೆ ಗರ್ಜಿಸಿದರೆ, ಮತ್ತೊಬ್ಬರು ಹುಲಿಯಂತೆ ಪ್ರತಿರೋಧ ಒಡ್ಡುತ್ತಿದ್ದರು. ಆದರೆ ಆ ಜಿದ್ದಾಜಿದ್ದಿನ ಹಿಂದೆ ಪರಸ್ಪರರ ಮೇಲಿದ್ದ ಗೌರವ ಮಾತ್ರ ಅಪಾರವಾಗಿತ್ತು. **ರಾಜೀನಾಮೆ ಪರ್ವ:** ವಿಭಿನ್ನ ಹಾದಿ, ಸಮಾನ ಘನತೆ ಮುಖ್ಯಮಂತ್ರಿ ಸ್ಥಾನಕ್ಕೆ ಇಬ್ಬರೂ ವಿದಾಯ ಹೇಳಿದ ಸಂದರ್ಭಗಳು ಅವರದೇ ಆದ ವಿಶಿಷ್ಟ ಶೈಲಿಗೆ ಸಾಕ್ಷಿಯಾಗಿದ್ದವು.

ಬಿ.ಎಸ್.ಯಡಿಯೂರಪ್ಪ

**ಭಾವನಾತ್ಮಕತೆಯ ಶಿಖರ:** ಯಡಿಯೂರಪ್ಪನವರ ರಾಜೀನಾಮೆಗಳು ಕೇವಲ ರಾಜಕೀಯ ವಿದ್ಯಮಾನಗಳು ಆಗಿರಲಿಲ್ಲ ಅವು ಭಾವನೆಗಳ ಮಹಾಪೂರ ಆಗಿದ್ದವು. ಪಕ್ಷದ ಆಂತರಿಕ ನಿರ್ಧಾರ ಹಾಗೂ ಹೈಕಮಾಂಡ್ ಸೂಚನೆಗೆ ಗೌರವ ಕೊಟ್ಟು ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದಾಗ ಕಣ್ಣೀರು ಹಾಕಿದರು. ಆ ಕಣ್ಣೀರು ದೌರ್ಬಲ್ಯದ್ದಾಗಿರಲಿಲ್ಲ ಅದು ರಾಜ್ಯದ ಜನರ ಮೇಲಿನ ಅತಿಯಾದ ಪ್ರೀತಿ ಮತ್ತು ತಾವು ಕಟ್ಟಿದ ಸಾಮ್ರಾಜ್ಯದ ಮೇಲಿನ ಮಮಕಾರದ್ದಾಗಿತ್ತು. ಅಧಿಕಾರ ಹೋದರೂ ಜನರ ಹೃದಯದಲ್ಲಿ ತಾವೇ 'ರಾಜಾಹುಲಿ' ಎಂಬುದನ್ನು ಅವರು ಸಾಬೀತುಪಡಿಸಿದರು.

**ಸಿದ್ದರಾಮಯ್ಯ ಸಿದ್ಧಾಂತದ ಅಚಲತೆ:** ಸಿದ್ದರಾಮಯ್ಯನವರ ನಿರ್ಗಮನದ ಶೈಲಿಯೇ ಬೇರೆ ಅವರು ಸಮಾಜವಾದಿ ಸಿದ್ಧಾಂತದ ಚೌಕಟ್ಟಿನಲ್ಲೇ ಹೆಜ್ಜೆಯಿಟ್ಟವರು. ಎರಡನೇ ಅವಧಿಯ 3 ವರ್ಷಗಳ ಯಶಸ್ವಿ ಆಡಳಿತ ಮುಗಿಸಿ ಹಿರಿಯ ನಾಯಕರಿಗೆ ಕೊಟ್ಟ ಮಾತಿನಂತೆ ಅತ್ಯಂತ ಸ್ಥಿತಪ್ರಜ್ಞರಾಗಿ ರಾಜ–ಕೀಯ ತತ್ವದಂತೆ ರಾಜೀನಾಮೆ ನೀಡಿದರು. ಹೈಕಮಾಂಡ್ ಒತ್ತಡಕ್ಕಾಗಲಿ ಅಥವಾ ಹಗರಣಗಳಿಗಾಗಲಿ ಮಣಿಯದ ಅವರು ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಗಂಭೀರ ಮುತ್ಸದ್ದಿತನ ಪ್ರದರ್ಶಿಸಿದರು. ಅಧಿಕಾರ ಇರಲಿ ಇಲ್ಲದಿರಲಿ ತಮ್ಮ ಸಿದ್ಧಾಂತದಿಂದ ಅವರು ಎಂದಿಗೂ ಹಿಂದೆ ಸರಿಯಲಿಲ್ಲ.

**ವೈಯಕ್ತಿಕ ಒಡನಾಟ:** 'ಶತ್ರುತ್ವ' ರಾಜ–ಕೀಯಕ್ಕಷ್ಟೇ, ಸ್ನೇಹ ಹೃದಯಕ್ಕೆ! ಇಂದಿನ

3ನೇ ಪುಟಕ್ಕೆ

# ಮಸ್ಕಿ:ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಖಂಡಿಸಿ ಇಂದು ಬೃಹತ್ ಪ್ರತಿಭಟನೆ



ನೈಜ್ಯ ದೆಸೆ ನ್ಯೂಸ್

ಮಸ್ಕಿ: ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ದಿಡೀರ ರಾಜೀನಾಮೆಯನ್ನು ಖಂಡಿಸಿ ಮಸ್ಕಿ ತಾಲ್ಲೂಕ ಅಹಿಂದ ಒಕ್ಕೂಟ ಹಾಗೂ ಹಾಲುಮತ ಸಮಾಜದಿಂದ ನಾಳೆ ಮಸ್ಕಿಯಲ್ಲಿ ಬೃಹತ್ ಪ್ರತಿಭಟನೆ ಮೆರವಣಿಗೆ ನಡೆಯಲಿದೆ,ಇಂದು **ಪೂರ್ವಭಾವಿ ಸಭೆ ನಡೆಸಿದ ತಾಲ್ಲೂಕು ಅಹಿಂದ ಒಕ್ಕೂಟ ಅದ್ಯಕ್ಷ ಕರಿಯಪ್ಪ ಹಾಲಾಪೂರ ಮತ್ತು ತಾಲ್ಲೂಕ ಹಾಲುಮತ ಸಮಾಜದ ಅದ್ಯಕ್ಷ ಬಸವರಾಜ ಪಾಟೀಲ್ ವಕೀಲರು ಹಾಗೂ ಪದಾದಿಕಾರಿಗಳು ಭಾಗವಹಿಸಿ.**

ಕಾಂಗ್ರೆಸ್ ಹೈಕಮಾಂಡ ನ ದೀಡಿರೆನೆ ನಿರ್ಧಾರ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಿನಾಮೆಯಿಂದ ಕೇವಲ ಕರ್ನಾಟಕಕ್ಕೆ ಮಾತ್ರ ನಷ್ಟವಲ್ಲ ಇಡಿ ದೇಶಕ್ಕೆ ನಷ್ಟ,ಸಿದ್ದರಾಮಯ್ಯ ನವರು ದೇಶದ ಅಹಿಂದ ಪ್ರಶ್ನಾತೀತಾ ನಾಯಕರು,ಅವರ ಯೊಜನೆಗಳು ಇಡಿ ದೇಶಕ್ಕೆ ಮಾದರಿ, ಆಡಳಿತ ಅವಧಿಯಲ್ಲಿ ಸಾಸಿವೆಯಷ್ಟು ಲೋಪವಿಲ್ಲ ಅಂತಹ ಒಬ್ಬ ನಾಯಕನನ್ನು ಏಕಾಏಕಿ ರಾಜಿನಾಮೆ ಪಡೆದು, ಇಡಿ ದೇಶದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಡ್ಯಾಮೆಜ್ ನ್ನು, ಪಂಕ್ಚರ್ ನ್ನು ನಿವೆ ಸೃಷ್ಟಿ ಮಾಡಿಕೊಂಡಿದ್ದಿರಿ,ಅದಕ್ಕೆ ನೆರೆಹೊಣೆ.

ಕಾಂಗ್ರೆಸ್ ಹೈಕಮಾಂಡ ಎಂದು ಇಂದಿನ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಅನೇಕರು ತಮ್ಮ ಮನದಾಳದ ನೋವನ್ನು ಆಕ್ರೋಶಭರಿತರಾಗಿ ಹಂಚಿಕೊಂಡರು,ಈ ಸಂದರ್ಭದಲ್ಲಿ ತಾಲ್ಲೂಕು ಅಹಿಂದ ವರ್ಗದ ಪದಾಧಿಕಾರಿಗಳು, ಹಾಲುಮತ ಸಮಾಜದ ಮುಖಂಡರು,ಸಿದ್ದರಾಮಯ್ಯ ರವರ ಅಭಿಮಾನಿಗಳು ಇದ್ದರು.

# ಸಿರುಗುಪ್ಪ: ಸೌದಾಗರ್ ಜುಮ್ಮಾ ಮಜೀದ್ ನಲ್ಲಿ ಗೌರವ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ: ಸೌದಾಗರ್ ಜುಮ್ಮಾ ಸುನ್ನಿ ಮಜೀದ್ ನಲ್ಲಿ ಖಲೀಫಾ ಮೌಲಾನ ಹಾಜಿ ಅಬ್ದುಲ್ ಸಮದ್ ನಿಜಾಮಿ ಬಂದಾ ನವಾಜಿ ಸಾಹಬ್, ಖತಿಬೊ ಇಮಾಮ್ ಮೌಲಾನಾ ಮೊಹಮ್ಮದ್ ಅಮೀಸ್, ಹಾಜಿ ಹಂಡಿ ಹುಸೇನ್ ಬಾಷಾ,**

ಹಾಜಿ ಎ. ಮೊಹಮ್ಮದ್ ಇಬ್ರಾಹಿಂ ಮಸೀದಿಯ ಮುಖ್ಯಸ್ಥರನ್ನು ಈದ್ಗಾ ಮತ್ತು ಖಬರಸ್ಥಾನ್ ಕಮೀಟಿಯ ಮಾಜಿ ಅಧ್ಯಕ್ಷರಾದ ಹಂಡಿ ಅಬ್ದುಲ್ ಕರೀಂ ಸಾಹಬ್ ಅವರ ಮಗ ಹಂಡಿ ಹುಸೇನ್ ಸಾಬ್ ಅವರು ಗೌರವಿಸಿ ಗುಲ್ಪೊಶಿ ಮಾಡಿ ಸನ್ಮಾನಿಸಿದರು



ಮಸೀದಿಯ ಅಧ್ಯಕ್ಷರು ಎಂ. ಮೆಹಬೂಬ್ ಬಾಷಾ, ಪದಾಧಿಕಾರಿಗಳು ಮೊಹಮ್ಮದ್ ರಫಿ ಮೊಹಮ್ಮದ್ ನೌಷಾದ್ ಅಲಿ ಮೊಹಮ್ಮದ್ ಗೌಸ್ ಮೊಹಮ್ಮದ್ ನಿಜಾಮುದ್ದೀನ್ ಮೊಹಮ್ಮದ್ ಹಾಜಿ, ಹಾಜಿ ಟಿ.ಜಿ. ನಿಜಾಮ್, ಗಫೂರ್ ಸಾಬ್, ಬೈಲೂರು ಜಿಲಾನ್ ಕೆ.ಖಾಜಾ ಸಮುದಾಯದವರು ಇದ್ದರು

ವರದಿ : ಮಸೀದಿ,ಅಬ್ದುಲ್ ಗೌಸ್, ಸಿರುಗುಪ್ಪ

# ಹಾಲಾಪೂರ ರೈತ ಸಂಪರ್ಕ ಕೇಂದ್ರದಲ್ಲಿ ತೊಗರಿ ಬೀಜ ವಿತರಣೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲ್ಲೂಕ ಹಾಲಾಪೂರ ರೈತ ಸಂಪರ್ಕ ಕೇಂದ್ರದಲ್ಲಿ ಮುಂಗಾರು ಮಳೆ ಕೃಪೆಯಿಂದ ರೈತರು ಬಹಳಷ್ಟು ಸಂತೊಷದಿಂದ, ಬಿತ್ತನೆ ಕಾರ್ಯ ಚಟುವಟಿಕೆ ತಯಾರಿ ಮಾಡಿಕೊಂಡ ಕಾರಣ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಮಾರುತಿ ಯರಗಲ್ ಮಾತನಾಡಿ ಮುಂಗಾರು ಹಂಗಾಮಿನ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತೊಗರಿ ಬೀಜಗಳನ್ನು ವಿತರಣೆ ಮಾಡಲಾಯಿತು,**

ಮುಂದಿನ ದಿನಗಳಲ್ಲಿ ನಮ್ಮ ಕೃಷಿ ಇಲಾಖೆಯ ವಿವಿಧ ಯೊಜನೆಗಳು ಬರಲಿದ್ದು ಅವುಗಳನ್ನು ಸಕಾಲಕ್ಕೆ ರೈತರಿಗೆ ಮುಟ್ಟಿಸುವ ಕೆಲಸ ಮಾಡಲಾಗುವುದು



ಎಂದು ಕೃಷಿ ಅಧಿಕಾರಿ ಮಾರುತಿ ಯಲಗಲ್ ತಿಳಿಸಿದರು. ರೈತರಾದ ವೀರಭದ್ರಪ್ಪತಾತ ಜಂಗಮರಹಳ್ಳಿ, ಬಸವಲಿಂಗಯ್ಯಸ್ವಾಮಿ ಹಾಲಾಪೂರ, ಸಣ್ಣ ಯಂಕಪ್ಪ ರಾಮಲದಿನ್ನಿ, ಬಸವರಾಜ ಸಾವುಕಾರ,ವಿರೇಶ,ದುರಗಪ್ಪ ಜಿನ್ನಾಪೂರ,ಅಂಬಣ್ಣ,ಬಸವರಾಜ ಚಿಕ್ಕದಿನ್ನಿ, ಹಾಗೂ ಸಿಬ್ಬಂದಿಗಳಾದ ಮಂಜುನಾಥಸ್ವಾಮಿ,ಮುದಕಪ್ಪ,ಮಾರುತಿ ಜಿನ್ನಾಪೂರ, ಶರಣಪ್ಪ ಇದ್ದರು.

# ಸಿಂಧನೂರಿನ ಕಾರುಣ್ಯಾಶ್ರಮವು ಮಾನವೀಯತೆಯ ವಿದ್ಯಾ ಕೇಂದ್ರವಾಗಿದೆ :ಶ್ರೀ ದೇವಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಾನು ಸಿಂಧನೂರು ನಗರದ ಈ ಕಾರುಣ್ಯ ಆಶ್ರಮಕ್ಕೆ ಭೇಟಿ ಕೊಟ್ಟಿದ್ದು ನನ್ನ ಜನ್ಮ ಸಾಥ–ರ್ಕವಾಗಿದೆ ಸಮಾಜದಿಂದ ತಿರಸ್ಕೃತಗೊಂಡವರನ್ನು ಸಮಾನರಂತೆ ಕಾಣುತ್ತಿರುವ ಕಾರುಣ್ಯಾಶ್ರಮ ಕರುಣೆಯ ಮಂದಿರವಾಗಿದೆ. ಮತ್ತು ಈ ಸಂಸ್ಥೆಯು ಹಲವಾರು ಸಮಾಜ ಸೇವಕರುಗಳಿಗೆ ಮಾದರಿಯಾಗಿ ಆದರ್ಶ ಸಂಸ್ಥೆಯಾಗಿರುವುದು ನಮ್ಮ ಕಲ್ಯಾಣ ಕರ್ನಾಟಕಕ್ಕೆ ಹೆಮ್ಮೆಯ ಕರುಣೆಯ ಕುಟುಂಬವಾಗಿದೆ.**

ಸಮಾಜಕ್ಕೆ ಇದು ಆಶ್ರಮವಾದರೆ ಈ ಆಶ್ರಮಕ್ಕೆ ಸಹಾಯ ಸಹಕಾರ ಮಾಡುವ ದಾನಿಗಳಿಗೆ ಮತ್ತು ಇಲ್ಲಿನ ಸಿಬ್ಬಂದಿಗಳಿಗೆ ಇದು ಅವಿಭಕ್ತ ಕುಟುಂಬವಾಗಿದೆ. ಈ ಕಾರುಣ್ಯ ಆಶ್ರಮದಲ್ಲಿರುವ ನೊಂದ ಜೀವಿಗಳಿಗೆ ಮತ್ತು ಬೆಲೆ ಇಲ್ಲದ ಜೀವಿಗಳಿಗೆ ರಕ್ತ ಸಂಬಂಧಿಗಳ ರೀತಿ ಸಂಬಂಧ ಬೆಳೆಸಿರುವುದು




ಮಾನವ ಧರ್ಮದ ಮೂಲ ಸಂಕೇತದ ಕಾರ್ಯ ಇದಾಗಿದೆ ಸಿಂಧನೂರಿನ ಕಾರುಣ್ಯಾಶ್ರಮವು ಮಾನವೀಯತೆಯ ವಿದ್ಯಾ ಕೇಂದ್ರವಾಗಿದೆ. ಇಂತಹ ಕಾರ್ಯಕ್ಕೆ ನಾವು ನೀವೆಲ್ಲರೂ ಪ್ರತಿಯೊಬ್ಬರೂ ಕೈಜೋಡಿಸಿ ಸರ್ಕಾರದ ಸೌಲಭ್ಯಗಳನ್ನು ಮತ್ತು ನಮ್ಮ ಕೈಯಿಂದಾದಂತಹ ಸಹಾಯ ಸಹಕಾರ ಮಾಡಿದಾಗ ಮಾತ್ರ ನಮ್ಮ ಜನ್ಮ ಸಾರ್ಥಕವಾಗುತ್ತದೆ ಎಂದು ನ್ಯಾಷನಲ್ ಅಸೋಸಿಯೇಷನ್ ಫಾರ್ ಬ್ಲೈಂಡ್(NAB) ರಾಯಚೂರು ಜಿಲ್ಲಾ ಅಡಿಯೇಟರ್ ಗಳಾದ ಶ್ರೀದೇವಿ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಭೇಟಿ ನೀಡಿ ಅವರು ಆಶ್ರಮದಲ್ಲಿನ ಸೇವೆ ನೋಡಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅವರನ್ನು ಆಶ್ರಮದ ವತಿಯಿಂದ ಸನ್ಮಾನಿಸಲಾಯಿತು. ನಂತರ ರಾಯಚೂರು ಹಿರಿಯ ನಾಗರಿಕ ಸಬಲೀಕರಣ ಇಲಾಖೆಯ ಪ್ರಥ–ಮ ದರ್ಜೆ ಸಹಾಯಕರಾದ ವಿನಯ್ ಕುಮಾರ್ ಮಾತನಾಡಿ ಈ ಸಂಸ್ಥೆಯ ಸೇವಾ ಕಾರ್ಯ ನಮ್ಮ ಇಲಾಖೆಗೂ ಕೂಡ ಗೌರವ ತಂದುಕೊಟ್ಟಿದೆ. ಮತ್ತು ವಿಶೇಷವಾಗಿ 2023 ನೇ ಇಸ್ವಿಯಲ್ಲಿ ರಾಜ್ಯದಲ್ಲಿ ಹಿರಿಯ ನಾಗರಿಕ ಸೇವಾ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದಂತ ಏಕೈಕ ಸಂಸ್ಥೆ ಎಂದು ಪ್ರಶಸ್ತಿ ಸ್ವೀಕರಿಸಿರುವುದು ನಮ್ಮ ಇಲಾಖೆಗೆ ಹಾಗೂ ಜಿಲ್ಲಾಡಳಿತಕ್ಕೆ ಗೌರವ ತಂದುಕೊಟ್ಟಿತು. ಮುಂದಿನ ದಿನಮಾನಗಳಲ್ಲಿ ನಮ್ಮ ಇಲಾಖೆಯಿಂದ ಸೌಲಭ್ಯಗಳು ಸರ್ಕಾರದ ಆದೇಶದಂತೆ ದೊರೆಯಲಿವೆ ಎಂದು ಮಾತನಾಡಿ ಆಶ್ರಮದ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ವಿನಯ್ ಕುಮಾರ್ ಪ್ರಥಮ ದರ್ಜೆ ಸಹಾಯಕರು ಜಿಲ್ಲಾ ಅಂಗವಿಕಲ ವಿಕಲಚೇತನ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ ರಾಯಚೂರು. ರಾರಾಯಪ್ಪ ಕಲ್ಮನಿ ಯು. ಆರ್. ಡಬ್ಲ್ಯು. ನಗರಸಭೆ ಸಿಂಧನೂರು. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಹಾಗೂ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ.ಜ್ಯೋತಿ. ಶರಣು ಸ್ವಾಮಿ ಬಸವ ಸ್ವಾಮಿ ಅನೇಕರು ಉಪಸ್ಥಿತರಿದ್ದರು

## ಸಾಹಿತ್ಯ ಸಿಂಚನ

ಮನಸ್ಸು

ಮನಸ್ಸು ಒಂದು ಸಾಗರದಂತೆ,
ಅದರ ಅಲೆಗಳು ಅನೇಕ ಭಾವನೆಗಳು.
ಒಮ್ಮೆ ಸಂತೋಷದ ನಗು ಮೂಡಿಸಿದರೆ,
ಮತ್ತೊಮ್ಮೆ ದುಃಖದ ಮಳೆ ಸುರಿಸುತ್ತದೆ.

ಕನಸುಗಳ ಹಕ್ಕಿ ಹಾರುವ ಗೂಡು,
ಭಾವನೆಗಳ ಬಣ್ಣ ತುಂಬಿದ ಬೀಡು.
ಪ್ರೀತಿ, ನೋವು, ಆಶೆ, ಭಯಗಳ ನಡುವೆ,
ಮನಸ್ಸು ಬದುಕಿನ ದಾರಿಯ ಹುಡುಕಾಟದಲ್ಲಿ.

ಒಳ್ಳೆಯ ಚಿಂತನೆ ಬೆಳಕಾದರೆ,
ಕೆಟ್ಟ ಯೋಚನೆ ಕತ್ತಲೆಯಾಗುತ್ತದೆ.
ಮನಸ್ಸು ಶಾಂತಿಯಾಗಿದ್ದರೆ ಬದುಕು ಸುಂದರ,
ಅದೇ ನಿಜವಾದ ಸಂತೋಷದ ಮಂದಿರ.

ಹನುಮೇಶ

# ಬಕ್ರೀದ ತ್ಯಾಗ ಬಲಿದಾನದ ಪ್ರತೀಕ: ಡಾ.ಮಿನಹಾಜುದ್ದೀನ

**ನೈಜ್ಯ ದೆಸೆ ನ್ಯೂಸ್**

ತಾಳಿಕೋಟಿ: ಬಕ್ರೀದ್ ಹಬ್ಬದ ನಿಮಿತ್ಯ ಪಟ್ಟಣದ ಇತಿಹಾಸಿಕ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಗುರುವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಧಾರ್ಮಿಕ ಯುವ ಮುಖಂಡ ಡಾ. ಮಿನಹಾಜುದ್ದೀನ ಕಾಜಿ ಅವರು ಮಾತನಾಡಿ ತ್ಯಾಗ ಮತ್ತು ಬಲಿದಾನದ ಪ್ರತೀಕವಾಗಿರುವ ಬಕ್ರೀದ್ ಹಬ್ಬವು ಪ್ರವಾದಿ ಇಬ್ರಾಹೀಮರು ತಮ್ಮ ಪುತ್ರ ಇಸ್ಮಾಯೀಲರನ್ನು ದೇವಸಂ ಪ್ರೀತಿಗಾಗಿ ಬಲಿ ನೀಡಲು ಮುಂದಾದ ಅವಿಸ್ಮರಣೀಯ ಘಟನೆಯನ್ನು ಸ್ಮರಿಸುವ ದಿನವಾಗಿದೆ.

ನಾವೆಲ್ಲರೂ ದೇವನಲ್ಲಿ ಅಚಲವಾದ ವಿಶ್ವಾಸವನ್ನಿಟ್ಟು ಬದುಕಬೇಕು ಅನ್ಯಾಯದ ಮಾರ್ಗ ತುಳಿಯಬಾರದು. ಇತರ ಧರ್ಮಿಯರ ಭಾವನೆಗಳಿಗೆ ಧಕ್ಕೆ ಆಗದ ರೀತಿಯಲ್ಲಿ ಹಬ್ಬಗಳನ್ನು ಎಲ್ಲಾ ಧರ್ಮಿಯರನ್ನು ಜೊತೆಗೂಡಿಸಿಕೊಂಡು ಆಚರಿಸಬೇಕು ಎಂದರು.



ಅಲ್ಲಾಹನಿಗೆ ಪ್ರಾಮಾಣಿಕ ಗುಣ ಅತ್ಯಂತ ಪ್ರಿಯವಾದದ್ದು ಅದನ್ನು ಬೆಳೆಸಿಕೊಂಡರೆ ಪುಣ್ಯ ಪ್ರಾಪ್ತವಾಗುತ್ತದೆ. ಎಂದಿಗೂ ಅನ್ಯಾಯದ ಮಾರ್ಗ ತುಳಿಯಬಾರದು, ಬಡವರ ಕಷ್ಟಗಳಿಗೆ ಸ್ಪಂದಿಸಬೇಕು ಕಷ್ಟದಲ್ಲಿರುವವರ ಸಮಸ್ಯೆಗಳಿಗೆ ಸ್ಪಂದಿಸಿದರೆ ದೇವನು ಸಂತುಷ್ಟನಾಗುತ್ತಾನೆ. ಪ್ರವಾದಿ ಮೊಹಮ್ಮದ್ ಅವರ ಆದರ್ಶಗಳನ್ನು ಅನುದಿನವು ಅನುಸರಿಸಿ.

ದುಶ್ಚಟಗಳಿಂದ ದೂರವಿದ್ದು ಉತ್ತಮ ಬದುಕನ್ನು ರೂಡಿಸಿಕೊಳ್ಳಿ ಇತರ ಧರೆಮಿಯರೊಂದಿಗೆ ಪ್ರೀತಿ ಮತ್ತು ವಿಶ್ವಾಸದಿಂದ ಬದುಕಲು ಪ್ರಯತ್ನಿಸಿ. ದೇಶದ ಕಾನೂನು ಮತ್ತು ಇತರ ಧರ್ಮಿಯರ ಭಾವನೆಗಳಿಗೆ ಧಕ್ಕೆ ಆಗದ ರೀತಿಯಲ್ಲಿ ಹಬ್ಬಗಳನ್ನು ಆಚರಿಸಿ ಎಂದರು. ಈದ್ ಸಾಮೂಹಿಕ ಪ್ರಾರ್ಥನೆಯಲ್ಲಿ ಧಾರ್ಮಿಕ ಮುಖಂಡ ಸಯ್ಯದ್ ಶಕೀಲ ಅಹ್ಮದ್ ಖಾಜಿ,ಹಫೀಜ ಇಬ್ರಾಹಿಂ ಮುಲ್ಲಾ, ಮುಫ್ತಿ ಅಜರುದ್ದೀನ ಕಾಸ್ಮಿ, ಗನಿಸಾಬ ಲಾಹೋರಿ,ಅಲ್ಲಾಭಕ್ಷಸಾಬ ನಮಾಜಕಟ್ಟಿ, ಅಬ್ದುಲ್ ರೆಹಮಾನಸಾಬ ಎಕೀನ,ಹಸನಸಾಬ ಮನಗೂಳಿ, ಅಬ್ದುಲ್ ರಜಾಕ ಮನಗೂಳಿ, ಸಿಕಂದರಸಾಬ ವಠಾರ,ಫಸಿಯುದ್ದೀನ ಖಾಜಿ, ಖಾಜಾಹುಸೇನ ಸಗರ,ಎಂ.ಎ.ಮೇತ್ರಿ,ರೋಶನ ಡೋಣಿ,ಎ.ಕೆ.ಬಾಗಬಾನ, ಮೆಹಬೂಬ ಚೋರಗಸ್ತಿ, ನಿರಂಜನಶಾ ಮಕಾಂದಾರ, ಅಬ್ದುಲ್ ಸತ್ತಾರ ಅವಟಿ,ಡಾ.ನಜೀರ ಕೋಳ್ಯಾಳ, ಮುಜಾಹೀದ ನಮಾಜಕಟ್ಟಿ, ಇಬ್ರಾಹಿಂ ಮನ್ಸೂರ, ಅಬ್ದುಲ್ ರೆಹಮಾನ ನಮಾಜಕಟ್ಟಿ, ಶಮಶುದ್ದೀನ ನಾಲಬಂದ, ದಾದಾಪೀರ ಚೌಧರಿ, ಮಹಮ್ಮದ್ ಶಫೀಕ ಇನಾಮದಾರ, ತನ್ವೀರ್ ಮನಗೂಳಿ ಮತ್ತಿತರರು ಇದ್ದರು.

# ಭಾರತದ ಆರ್ಥಿಕತೆ ಮತ್ತು ಮೋದಿ ಸಾಧನೆ ಶ್ಲಾಘಿಸಿದ ಆಸ್ಟ್ರೇಲಿಯಾ ಪ್ರಧಾನಿ ಅಲ್ಬನೀಸ್


**ನೈಜ್ಯ ದೆಸೆ ನ್ಯೂಸ್**

ಕ್ಯಾನ್‌ಬೆರಾ: ಭಾರತದ ಆರ್ಥಿಕ ಪ್ರಗತಿಯನ್ನು ಇಂಡೋ-ಪೆಸಿಫಿಕ್ ಪ್ರದೇಶಕ್ಕೆ ಅಸಾಧಾರಣ ಅವಕಾಶ ಎಂದು ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್ ಬಣ್ಣಿಸಿದ್ದಾರೆ. ಭರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಶೀಘ್ರದಲ್ಲೇ ಮತ್ತೆ ಆತಿಥ್ಯ ವಹಿಸಲು ಎದುರು ನೋಡುತ್ತಿದ್ದೇನೆ ಎಂದು ಹೇಳಿದ್ದಾರೆ. ಕ್ಯಾನ್‌ಬೆರಾದ ಸಂಸತ್ತಿನಲ್ಲಿ ಮಾತನಾಡಿದ ಅಲ್ಬನೀಸ್, ಈಗಾಗಲೇ ವಿಶ್ವದ ಅತಿದೊಡ್ಡ ಜನಸಂಖ್ಯೆ ಹೊಂದಿರುವ ಭಾರತ ಈ ದಶಕದಲ್ಲೇ ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಹೇಳಿದರು.



ಇದು ನಮ ಪ್ರದೇಶಕ್ಕೆ ಅಸಾಧಾರಣ ಅವಕಾಶವಾಗಿದೆ. ನಾವು ಪೆಸಿಫಿಕ್ ರಾಷ್ಟ್ರವಾಗಿದ್ದರೂ, ಭಾರತೀಯ ಮಹಾಸಾಗರ ರಾಷ್ಟ್ರವೂ ಆಗಿದ್ದೇವೆ ಎಂದು ಅವರು ಹೇಳಿದರು.2022ರಲ್ಲಿ ಸಹಿ ಮಾಡಲಾದ ಆರ್ಥಿಕ ಸಹಕಾರ ಮತ್ತು ವ್ಯಾಪಾರ ಒಪ್ಪಂದ ಭಾರತ-ಆಸ್ಟ್ರೇಲಿಯಾ ನಡುವಿನ ವ್ಯಾಪಾರ ಸಂಬಂಧವನ್ನು ಮತ್ತಷ್ಟು ಬಲಪಡಿಸಿದೆ ಎಂದ ಅವರು, ಸಂಸ್ಕೃತಿ, ಶಿಕ್ಷಣ ಮತ್ತು ಕ್ರಿಕೆಟ್ ಮೂಲಕವೂ ಎರಡೂ ರಾಷ್ಟ್ರಗಳು ಇನ್ನಷ್ಟು ಹತ್ತಿರವಾಗಿವೆ ಎಂದು ಹೇಳಿದರು. 1991ರಲ್ಲಿ ಬ್ಯಾಕ್‌ಪ್ಯಾರ್ಕ ಆಗಿ ಮೊದಲ ಬಾರಿ ಭಾರತಕ್ಕೆ ಭೇಟಿ ನೀಡಿದ್ದ ನೆನಪನ್ನು ಅಲ್ಬನೀಸ್ ಹಂಚಿಕೊಂಡರು. ನಂತರ ಪ್ರಧಾನಿಯಾಗಿದ್ದ ವೇಳೆ ಎರಡು ಬಾರಿ ಭಾರತಕ್ಕೆ ಭೇಟಿ ನೀಡಿದ್ದಾಗಿ ತಿಳಿಸಿದರು. ಭಾರತವನ್ನು ಅರ್ಥಮಾಡಿಕೊಳ್ಳಲು ಅತ್ಯುತ್ತಮ ಮಾರ್ಗವೆಂದರೆ ಬಸ್ ಅಥವಾ ರೈಲಿನಲ್ಲಿ ಪ್ರಯಾಣಿಸುವುದು. ಅಲ್ಲಿನ ಜನರ ಆತೀಯತೆಯನ್ನು ನೇರವಾಗಿ ಅನುಭವಿಸುವುದು ಅದ್ಭುತ ಅನುಭವ ಎಂದು ಅವರು ಹೇಳಿದರು.ಇದೇ ರೀತಿ, ಪ್ರಧಾನಿ ಮೋದಿ ಅವರನ್ನು ಶೀಘ್ರದಲ್ಲೇ ಇಲ್ಲಿ ಆತಿಥ್ಯ ವಹಿಸುವ ಗೌರವ ನನಗೆ ಮತ್ತೆ ಸಿಗಲಿದೆ. ಎರಡನೇ ಬಾರಿ ಅದನ್ನು ಪುನರಾವರ್ತಿಸಲು ನಾನು ಎದುರು ನೋಡುತ್ತಿದ್ದೇನೆ ಎಂದು ಅಲ್ಬನೀಸ್ ಹೇಳಿದರು. ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಸುಮಾರು 10 ಲಕ್ಷ ಭಾರತೀಯ ಮೂಲದ ಸಮುದಾಯ ಈ ಭೇಟಿಯನ್ನು ಇನ್ನಷ್ಟು ವಿಶೇಷಗೊಳಿಸಲಿದೆ ಎಂದು ಅವರು ಹೇಳಿದರು. ಈ ಸಮುದಾಯವೇ ಆಸ್ಟ್ರೇಲಿಯಾದಲ್ಲಿ ವೇಗವಾಗಿ ಬೆಳೆಯುತ್ತಿರುವ ವಲಸಿಗ ಸಮುದಾಯವಾಗಿದೆ ಎಂದು ಉಲ್ಲೇಖಿಸಿದರು. ಪ್ರಧಾನಿ ಮೋದಿ ಕೊನೆಯದಾಗಿ 2023ರ ಮೇ ತಿಂಗಳಲ್ಲಿ ಆಸ್ಟ್ರೇಲಿಯಾಗೆ ಭೇಟಿ ನೀಡಿದ್ದರು. ಆಸ್ಟ್ರೇಲಿಯಾದ ಭಾರತೀಯ ಸಮುದಾಯ ದೇಶದ ಆರ್ಥಿಕತೆಯನ್ನು ಬಲಪಡಿಸಿದ್ದು, ಅನೇಕ ಸಣ್ಣ ಉದ್ಯಮಗಳಿಗೆ ಸಹಾಯವಾಗಿದೆ ಎಂದು ಅಲ್ಬನೀಸ್ ಹೇಳಿದರು. ನಿಮ ಕಾರಣದಿಂದಲೇ ನಮ ದೇಶ ಇನ್ನಷ್ಟು ಉತ್ತಮವಾಗಿದೆ. ನನ್ನ ಸರ್ಕಾರ ಸದಾ ನಿಮ ಮತ್ತು ನಿಮ ಹಿತಾಸಕ್ತಿಗಳ ಪರ ನಿಲ್ಲುತ್ತದೆ. ಸಮಾಜವನ್ನು ವಿಭಜಿಸುವ ಯಾವುದೇ ಪ್ರಯತ್ನವನ್ನು ನಾವು ತಿರಸ್ಕರಿಸುತ್ತೇವೆ ಎಂದು ಅವರು ಹೇಳಿದರು. ಸಂಸತ್ತಿನಲ್ಲಿ ಅಲ್ಬನೀಸ್ ಮಾತನಾಡಿದ ವಿಡಿಯೊವನ್ನು ಭಾರತದಲ್ಲಿನ ಆಸ್ಟ್ರೇಲಿಯಾ ಹೈಕಮಿಷನರ್ ಫಿಲಿಪ್ ಗ್ರೀನ್ ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದು, ಭಾರತದೊಂದಿಗೆ ತಮ ಪ್ರಧಾನಿಯ ಆತೀಯ ಸಂಬಂಧವು ತನ್ನ ಕೆಲಸವನ್ನು ಅನಂತವಾಗಿ ಅರ್ಥಪೂರ್ಣ ಮಾಡಿದೆ ಎಂದು ಹೇಳಿದ್ದಾರೆ.

# ‘ಕಾಲಘಟ್ಟ’ ಚಿತ್ರದ “ನೀನೇನೆ ನನ್ನ ದೇವತೆ” ಹಾಡು ಭರ್ಜರಿ ಸದ್ದು



**ನೈಜ್ಯ ದೆಸೆ ನ್ಯೂಸ್**

ಬೆಂಗಳೂರು: ದಿಕ್ಷಿತಾ ಎಂಟರ್ ಪ್ರೈಸಸ್ ಬೆಂಗಳೂರು ಅವರ “ಕಾಲಘಟ್ಟ” ಕನ್ನಡ ಚಲನಚಿತ್ರದ ಮೊದಲ ಲಿರಿಕಲ್ ಹಾಡು “ನೀನೇನೆ ನನ್ನ ದೇವತೆ” ಬಿಡುಗಡೆಯಾಗಿದ್ದು ಸಿನಿಪ್ರೇಕ್ಷಕರ ಮತ್ತು ಸಂಗೀತ ಪ್ರಿಯರ ಗಮನ ಸೆಳೆದು ಯ್ಯೂಟೂಬ್‌ದಲ್ಲಿ ಭರ್ಜರಿ ಸದ್ದು ಮಾಡುತ್ತಿದೆ.

ಹಾಡು ಕೇವಲ ಒಂದು ಮೆಲೋಡಿ ಅಲ್ಲ?, ಅದು ನಮ್ಮ ಮಣ್ಣಿನ ಆತ್ಮವನ್ನು ಹೊತ್ತ ಭಾವನೆ. ಹಾಡಿನಲ್ಲಿ ಮೈಲಾರ, ಹರಕೆ, ಜಾಗಟೆ, ಕಾವೇರಿ ಹೀಗೆ ನಮ್ಮ ನಾಡಿನ ನಂಬಿಕೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಪದಗಳನ್ನು ಬಳಸಲಾಗಿದೆ. ಈ ಹಾಡಿನ ಮೂಲಕ ಪ್ರೇಕ್ಷಕರಿಗೆ ತಮ್ಮ ಊರು, ತಮ್ಮ ಪ್ರೀತಿ, ತಮ್ಮ ನೆನಪುಗಳನ್ನು ನಮ್ಮ ನಾಡಿನ ಸಂಸ್ಕೃತಿಯನ್ನು ಹೊಸ ರೀತಿಯಲ್ಲಿ ಮರುಕಳಿಸುವ ಪ್ರಯತ್ನ ಮಾಡಲಾಗಿದೆ ಎಂದು ಯುವ ನಿರ್ದೇಶಕ ಕೆ. ಪ್ರಕಾಶ್ ಅಂಬಳೆ ತಿಳಿಸಿದ್ದಾರೆ.

ಚಿತ್ರದಲ್ಲಿ ನಾಯಕನಾಗಿ ಅಭಿದಾಸ್ ಹಾಗೂ ನಿತಿಲ್ ಅಭಿನಯಿಸಿದ್ದು, ನಾಯಕಿಯರಾಗಿ ಖುಷಿ ಮತ್ತು ಮೇಘ ಕಾಣಿಸಿಕೊಂಡಿದ್ದಾರೆ. ಚಿತ್ರರಂಗದ ಹಿರಿಯ ಕಲಾವಿದರಾದ ಶೋಭರಾಜ್, ಭವ್ಯ, ರಮೇಶ್ ಭಟ್, ಪ್ರಶಾಂತ್ ರವಿ , ಮಂಡ್ಯ ಸೀತಾರಾಮ್ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ತಾಂತ್ರಿಕ ವರ್ಗದಲ್ಲಿ ಛಾಯಾಗ್ರಹಣ-ಸದಾಶಿವ ಹಿರೇಮಠ-ರಾಜ್ ಕಡೂರ್, ಸಂಗೀತ ಎ.ಎಂ.ನೀಲ್, ಸಂಕಲನ ವೆಂಕಿ ಯುಡಿವಿ, ಸಾಹಸ ಮಾಸ್‌ಮಾದ, ಸಾಹಿತ್ಯ ನಮ್ ಋಷಿ, ಸ್ಯಾಂಕಿ, ಸಿದ್ದುಶಿವರಾಮ್,

ಪ್ರಸಾಧನ ವಿಜಯ್, ಪಿಆರ್ ಓ- ಹರೀಶ್ ಅರಸು, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ್ ಹಂಡಿಗಿ, ಪ್ರಚಾರ ವಿನ್ಯಾಸ ಆರ್. ಕ್ರಿಯೇಟಿವ್ , ನಿರ್ದೇಶನ ತಂಡ ಗಣೇಶ್,ರವಿ, ಸಾಗರ್ ಇದ್ದು, ಕಥೆ-ಚಿತ್ರಕಥೆ-ಸಂಭಾಷಣೆ ಜೊತೆಗೆ ನಿರ್ದೇಶನವನ್ನು ಕೆ. ಪ್ರಕಾಶ್ ಅಂಬಳೆ ಮಾಡಿದ್ದಾರೆ. ಲಯನ್ ಚಿಕ್ಕೇಗೌಡ , ಟಿ.ಸಿ ತಳಗವಾಡಿ ನಿರ್ಮಾಪಕರಾಗಿದ್ದಾರೆ. ಮುಂದಿನ ತಿಂಗಳು ರಾಜ್ಯಾದ್ಯಂತ ತೆರೆಗೆ ಬರಲಿರುವ “ಕಾಲಘಟ್ಟ” ಚಿತ್ರತಂಡಕ್ಕೆ ಸಿನಿಪ್ರೇಕ್ಷಕರ ಪ್ರೀತಿ, ಆಶೀರ್ವಾದ ಇರಲಿ ಎಂಬ ಆಶಯವನ್ನು ಚಿತ್ರ ತಂಡ ವ್ಯಕ್ತಪಡಿಸಿದೆ.
-ಡಾ.ಪ್ರಭು ಗಂಜಿಹಾಳ

# ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಉಚಿತ ಯೋಗ ತರಬೇತಿ ಶಿಬಿರ

**ನೈಜ್ಯ ದೆಸೆ ನ್ಯೂಸ್**

ಮಾನ್ವಿ: ಪಟ್ಟಣದ ಕಲ್ಮಠ ಧ್ಯಾನಮಂದಿರದಲ್ಲಿ ಯೋಗಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್, ಎಸ್.ವಿ.ವಿ.ಕೆ.(ರಿ) ಕೆ.ಪಿ.ಎಸ್.ವಿ.ಎಸ್, ವಿ.ಎಸ್. ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ಹಾಗೂ ಲಯನ್ಸ್ ಕ್ಲಬ್ ಮಾನ್ವಿ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಜೂನ್ 5ರಿಂದ 21ರವರೆಗೆ ಉಚಿತ ಯೋಗ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಪ್ರತಿದಿನ ಬೆಳಿಗ್ಗೆ 5.30ರಿಂದ 6.30ರವರೆಗೆ ವೈದ್ಯ ವಿದ್ಯಾರ್ಥಿಗಳು ಹಾಗೂ ಪುರುಷರಿಗಾಗಿ ಷಟ್ ಕ್ರಿಯೆಗಳ ಯೋಗಾಭ್ಯಾಸ ನಡೆಯಲಿದ್ದು, ಸಂಜೆ 6.30ರಿಂದ 7.00ರವರೆಗೆ ಮಹಿಳೆಯರಿಗಾಗಿ ಕ್ಲಿನಿಕಲ್ ಯೋಗ ಥೆರಪಿ ತರಬೇತಿ



ನೀಡಲಾಗುತ್ತದೆ. ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ರಕ್ತದೊತ್ತಡ, ಬೊಜ್ಜು, ಬೆನ್ನು, ಕತ್ತು ಹಾಗೂ ಮೊಣಕಾಲು ನೋವು, ಮಾನಸಿಕ ಒತ್ತಡ, ಪಿ.ಸಿ.ಒ.ಡಿ ಮತ್ತು ಮುಟ್ಟಿನ ಸಮಸ್ಯೆಗಳಿಗೆ ಸರಳ ಯೋಗಾಸನಗಳನ್ನು ತಿಳಿಸಿಕೊಡಲಾಗುತ್ತದೆ.

ಆಸಕ್ತರು ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಎಸ್.ವಿ.ಎಸ್, ವಿ.ಎಸ್. ಆಯುರ್ವೇದ ಕಾಲೇಜಿನ ಪ್ರಾಚಾರ್ಯರ ದೂರವಾಣಿ ಸಂಖ್ಯೆ 9900682020, ಲಯನ್ಸ್ ಕ್ಲಬ್ ಮಾನ್ವಿ ಅಧ್ಯಕ್ಷ ನಾಗರಾಜ್ ಅವರ ಮೊಬೈಲ್ ಸಂಖ್ಯೆ 9945246999 ಹಾಗೂ 9972345711 ಸಂಪರ್ಕಿಸ ಬಹುದಾಗಿದೆ ಎಂದು ಯೋಗುರು ಅನ್ನದಾನಯ್ಯ ಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪೇಪರ್‌ಲೆಸ್ ನೋಂದಣಿ ವ್ಯವಸ್ಥೆ ಹಿಂಪಡೆಯಲು ದಸ್ತುಬರಹಗಾರರ ಆಗ್ರಹ

**ನೈಜ್ಯ ದೆಸೆ ನ್ಯೂಸ್**

ಮುದ್ದೇಬಿಹಾಳ: ರಾಜ್ಯ ಸರ್ಕಾರ ಜಾರಿಗೆ ತರಲು ಮುಂದಾಗಿರುವ ಪೇಪರ್‌ಲೆಸ್ ನೋಂದಣಿ ವ್ಯವಸ್ಥೆಯನ್ನು ತಕ್ಷಣ ಹಿಂಪಡೆಯಬೇಕು ಎಂದು ಆಗ್ರಹಿಸಿ ವಿಜಯಪುರ ಜಿಲ್ಲಾ ಮುದ್ದೇಬಿಹಾಳ, ತಾಳಿಕೋಟಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಕೃತ ಪರವಾನಿಗೆ ಪಡೆದ ದಸ್ತಾವೇಜು ಬರಹಗಾರರ ಚಾರಿಟೇಬಲ್ ಟ್ರಸ್ಟ್ (ರಿ) ವತಿಯಿಂದ ತಹಶಿಲ್ದಾರರ ಶ್ರೀಮತಿ ಕೀರ್ತಿ ಚಾಲಕರವರಿಗೆ ಮನವಿ ಸಲ್ಲಿಸಲಾಯಿತು.

ಈ ಮನವಿಯಲ್ಲಿ, ಶತಮಾನಗಳಿಂದ ದಸ್ತುಬರಹಗಾರರು ಸಾರ್ವಜನಿಕರ ಭೂಮಿ ಮತ್ತು ಆಸ್ತಿ ನೋಂದಣಿ ಕಾರ್ಯವನ್ನು ಸರ್ಕಾರದ ನಿಯಮಾವಳಿಗಳ ಪ್ರಕಾರ ನಿರ್ವಹಿಸುತ್ತಾ ಬಂದಿದ್ದಾರೆ. ಕಾಲಾನುಸಾರ ಕೈಬರಹದಿಂದ ಟೈಪಿಂಗ್ ಹಾಗೂ ಗಣಕೀಕೃತ ವ್ಯವಸ್ಥೆಯವರೆಗೆ ಬದಲಾವಣೆಗಳನ್ನು ಸ್ವೀಕರಿಸಿ




ಕಾರ್ಯನಿರ್ವಹಿಸಿದ್ದೇವೆ. ಆದರೆ ಇದೀಗ ಕಾವೇರಿ 2.0 ತಂತ್ರಾಂಶದ ಮೂಲಕ ಪೇಪರ್‌ಲೆಸ್ ನೋಂದಣಿ ವ್ಯವಸ್ಥೆಯನ್ನು ಜಾರಿಗೆ ತರುವುದರಿಂದ ದಸ್ತುಬರಹಗಾರರ ಭವಿಷ್ಯ ಸಂಕಷ್ಟಕ್ಕೆ ಸಿಲುಕಲಿದೆ” ಎಂದು ಉಲ್ಲೇಖಿಸಲಾಗಿದೆ.

ದಸ್ತುಬರಹಗಾರರು ಇಲಾಖೆ ಮತ್ತು ಸಾರ್ವಜನಿಕರ ನಡುವೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡುತ್ತಿದ್ದು, ಸರ್ಕಾರಕ್ಕೆ ಹೆಚ್ಚಿನ ರಾಜಸ್ವ ಸಂಗ್ರಹವಾಗಲು ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಮುದ್ದೇಬಿಹಾಳ ತಾಲೂಕಿನಿಂದ ಮಾತ್ರ ತಿಂಗಳಿಗೆ ಸುಮಾರು ಎರಡು ಕೋಟಿ ರೂ. ಆದಾಯ ಸರ್ಕಾರಕ್ಕೆ ಸಂಗ್ರಹವಾಗುತ್ತಿದೆ” ಎಂದು ತಿಳಿಸಲಾಗಿದೆ. ಪೇಪರ್‌ಲೆಸ್ ವ್ಯವಸ್ಥೆಯಿಂದ ಸಾರ್ವಜನಿಕರಿಗೆ ತಮ್ಮ ಆಸ್ತಿ ಖರೀದಿ ಸಂಬಂಧಿಸಿದ ದಾಖಲೆಗಳು ಕೈಯಲ್ಲಿ ಇರುವುದಿಲ್ಲ. ತಂತ್ರಜ್ಞಾನ ವೈಫಲ್ಯ ಉಂಟಾದರೆ ದಾಖಲೆಗಳ ನಾಶದ ಭೀತಿ ಎದುರಾಗಬಹುದು.

ಹೀಗಾಗಿ ಪೇಪರ್‌ಲೆಸ್ ನೋಂದಣಿ ವ್ಯವಸ್ಥೆಯನ್ನು ಹಿಂಪಡೆದು, ದಸ್ತುಬರಹಗಾರರಿಗೆ ಪ್ರತ್ಯೇಕ ಲಾಗಿನ್ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಈ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ದಸ್ತುಬರಹಗಾರರು ಒಂದು ದಿನದ ಸಾಂಕೇತಿಕ ಲೇಖನಿ ಹೋರಾಟ ನಡೆಸಿದರು. ಈ ಸಂದರ್ಭದಲ್ಲಿ , ಸಂಘಟನೆಯ ಅಧ್ಯಕ್ಷರಾದ ಎಚ್ ಆರ್ ಭಾಗವಾನ, ಕಾರ್ಯದರ್ಶಿಗಳು ಡಿ ಎಸ್ ತೋಗರಿ, ಆರ್ ಎಂ ಪೌವಲೆ, ಎಚ್ ಎಸ್ ನಾಯ್ಕೋಡಿ, ರಾಜು ಜೋಳದ, ಶಂಕರಪ್ಪ ಕಡಿ, ಡಿ ಡಸ್ ಹಿರೇಮಠ, ಆರ್ ಎಸ್ ಶಂಕಿನ, ಆರ್ ಎ ನಾಡಗೌಡ, ಡಂ ಎನ್ ಕಟಗಿ, ಎಂ ಎ ಮುಲ್ಲಾ, ಹಾಗೂ ದಸ್ತುಬರಹಗಾರರು ಉಪಸ್ಥಿತರಿದ್ದರು.

# ಜಾಲಹಳ್ಳಿಯಲ್ಲಿ ಮುಸ್ಲಿಂ ಬಾಂಧವರಿಂದ ಪವಿತ್ರ ಬಕ್ರೀದ್ ಹಬ್ಬ ಅದ್ದೂರಿಯಾಗಿ ಆಚರಣೆ

**ನೈಜ್ಯ ದೆಸೆ ನ್ಯೂಸ್**

ಜಾಲಹಳ್ಳಿ: ಗ್ರಾಮದಲ್ಲಿ ಜಾಮಿಯಾ ಮಸೀದಿ ನೇತೃತ್ವದಲ್ಲಿ ಪವಿತ್ರ ಬಕ್ರೀದ್ ಹಬ್ಬವನ್ನು ಎಲ್ಲಾ ಮುಸ್ಲಿಂ ಬಾಂಧವರು ಸೇರಿ ಅತ್ಯಂತ ಸಂಭ್ರಮ ಹಾಗೂ ಭಕ್ತಿಭಾವದಿಂದ ಆಚರಣೆ ಮಾಡಿದರು. ಹಬ್ಬದ ಅಂಗವಾಗಿ ಗ್ರಾಮದಲ್ಲಿರುವ ಕಬ್ರ್ ಸ್ಥಾನದಲ್ಲಿರುವ ಈದ್ಗಾ ಮೈದಾನದಲ್ಲಿ ಬೆಳಿಗ್ಗೆ 9:00 ಗಂಟೆಗೆ ಪ್ರಾರ್ಥನೆ ನೆರವೇರಿಸಲಾಯಿತು ಆಶರಖಾನ್ ದಿಂದ ಬೆಳಿಗ್ಗೆ 8:30ಕ್ಕೆ ಎಲ್ಲಾ ಮುಸ್ಲಿಂ ಬಾಂಧವರು ಪಾದಯಾತ್ರೆ ಮೂಲಕ ತೆರಳಿ, ಬೆಳಿಗ್ಗೆ 9 ಗಂಟೆಗೆ ಈದ್ಗಾ ಮೈದಾನ ತಲುಪಿದರು. ಬಳಿಕ ಮೌಲಾನಾ ಮೊಹಮ್ಮದ್ ತಾಜುದ್ದೀನ್ ಅವರ ನೇತೃತ್ವದಲ್ಲಿ ವಿಶೇಷ ಸಮೂಹ ಪ್ರಾರ್ಥನೆ ನೆರವೇರಿತು.

ಈ ಸಂದರ್ಭದಲ್ಲಿ ಮಾತನಾಡಿದ ಮೌಲಾನಾ ಮೊಹಮ್ಮದ್ ತಾಜುದ್ದೀನ್ ಅವರು, “ಬಕ್ರೀದ್ ಹಬ್ಬವು ತ್ಯಾಗ, ಬಲಿದಾನ ಮತ್ತು ಆಹಾರ ದಾನದ ಸಮ್ಮಿಲನವಾಗಿದೆ. ಈ ಹಬ್ಬಕ್ಕೆ ಸುಮಾರು



5000 ವರ್ಷದ ಇತಿಹಾಸವಿದೆ. ಸಮಾಜದಲ್ಲಿ ಎಲ್ಲರೂ ಪರಸ್ಪರ ಸಹಾನುಭೂತಿ ಮತ್ತು ಕರುಣೆಯಿಂದ ನಡೆದುಕೊಳ್ಳಬೇಕು,” ಎಂದು ಕರೆ ನೀಡಿದರು. ಬಡವರೊಂದಿಗೆ ಸಹಾನುಭೂತಿ ತೋರಿಸಿ, ಎಲ್ಲ ಸಮಾಜದ ಬಂಧುಗಳನ್ನು ಹಬ್ಬಕ್ಕೆ ಆಹ್ವಾನಿಸಿ ಊಟೋಪಚಾರ ನೀಡುವ ಮೂಲಕ ಸಾಮಾಜಿಕ ಐಕ್ಯತೆ ಕಾಪಾಡಬೇಕೆಂದು ತಿಳಿಸಿದರು. ಧರ್ಮವು ಬಡ-ಶ್ರೀಮಂತ ಎಂಬ ಭೇದವಿಲ್ಲದೆ ಎಲ್ಲರನ್ನು ಒಂದೇ ಸಾಲಿನಲ್ಲಿ ನಿಲ್ಲಿಸುತ್ತದೆ ಎಂದು ಹೇಳಿದರು. ದಾನಧರ್ಮದ ಮೂಲಕ ಸಮಾಜದಲ್ಲಿ ಶಾಂತಿ ನೆಲೆಸಬೇಕು ಎಂದು ಸಂದೇಶ ನೀಡಿದರು.

ಇದೇ ವೇಳೆ ಜಾಮಿಯಾ ಮಸೀದಿ ಅಧ್ಯಕ್ಷರಾದ ಬಾಬಾ ಮೆಡಿಕಲ್ ಅವರು, ಯುವಕರು ಮೊಬೈಲ್ ಬಳಕೆಯಲ್ಲಿ ಎಚ್ಚರಿಕೆಯಿಂದಿರಬೇಕು ಎಂದು ಸಲಹೆ ನೀಡಿದರು. ಜೊತೆಗೆ ಚುನಾವಣಾ ಆಯೋಗದಿಂದ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಎಲ್ಲರೂ ಭಾಗವಹಿಸಿ ತಮ್ಮ ಮತದಾನದ ಹಕ್ಕನ್ನು ಖಚಿತಪಡಿಸಿಕೊಳ್ಳಬೇಕೆಂದು ತಿಳಿಸಿದರು. ಸಾಮಾಜಿಕ ಜಾಲತಾಣಗಳಲ್ಲಿ ಅನಾವಶ್ಯಕವಾಗಿ ಶೇರ್ ಹಾಗೂ ಲೈಕ್ ಮಾಡುವುದನ್ನು ತಪ್ಪಿಸಿಕೊಳ್ಳಬೇಕೆಂದು ಕರೆ ನೀಡಿದರು. ಈ ಕಾರ್ಯಕ್ರಮದಲ್ಲಿ ಜಾಮಿಯಾ ಮಸೀದಿ ಕಮಿಟಿ, ಕಬ್ರಸ್ತಾನ ಕಮಿಟಿ, ಟಿಪ್ಪು ಸುಲ್ತಾನ್ ಕಮಿಟಿ, ಶಾಹಿನ್ ಮಸೀದಿ ಕಮಿಟಿ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಜೊತೆಗೆ ಊರಿನ ಪ್ರಮುಖರಾದ ಮೈನುದ್ದೀನ್ ಗುತ್ತೇದಾರರು, ಹಾಜಿ ಮಲಿಕ್ ಹಮ್ಮದ್ ಸಾಬ್, ಬಾಬಾ ಮೆಡಿಕಲ್, ಯಾಸಿನ್ ಮುಲ್ಲಾ, ನಸೀರ್ ಸಾಬ್ ಮುಲ್ಲಾ, ಶೇಖ್ ಮಹಿಬೂಬ್ ಸಾಬ್ ಕಂಟ್ರಾಕ್ಟರ್, ಹೈದರಲಿ ಮುಲ್ಲಾ, ರಾಜ್ ಮಹಮ್ಮದ್ ಕಲೆಗಾರ್, ಖುರಶೀದ್ ಪಟೇಲ್, ಇಮಾಮ್ ಸಾಬ್ ಉದ್ದಾರ, ಅಲಿಬಾಬಾ ಪತ್ರಕರ್ತರು, ಶಬ್ಬೀರ್ ಸುಣ್ಣದಕಲ್, ಜಾಕಿರ್ ಹುಸೇನ್ ಆರ್ತಿ, ಅಬ್ದುಲ್ ಗನಿ ಸಿತಾರಾ ಬೇಕರಿ, ಹುಸೇನ್ ಭಾಷಾ ಆರ್ತಿ, ಹುಸೇನ್ ಭಾಷಾ ಡ್ರೈವರ್, ರಿಯಾಜ್ ಆರ್ತಿ, ಅಬ್ದುಲ್ ನಬಿ ಸಾಬ್, ಅಬ್ಬಾಸ್ ಅಲಿ ಸಾಬ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಗ್ರಾಮ ಪಂಚಾಯತ್ ಸದಸ್ಯರಾದ ಮಕ್ತೂಮ್ ಪರಾಸಿ, ಅಬ್ದುಲ್ ರೆಹಮಾನ್ ಖುರೇಶಿ, ಹೈದರ್ ಉದ್ದಾರ, ಹುಸೇನ್ ನಾಸಿ, ಬುಡನ್ ಸಾಬ್ ಮಾಸನೂರ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಹಬ್ಬದ ಪ್ರಯುಕ್ತ ಗ್ರಾಮ ಪಂಚಾಯತ್ ವತಿಯಿಂದ ಸ್ವಚ್ಛತಾ ವ್ಯವಸ್ಥೆ ಮಾಡಲಾಗಿದ್ದು, ಜಾಲಹಳ್ಳಿ ಪೊಲೀಸ್ ಠಾಣೆಯಿಂದ ಸೂಕ್ತ ಬಂದೋಬಸ್ತ್ ಒದಗಿಸಲಾಗಿತ್ತು. ಇದಕ್ಕಾಗಿ ಪೊಲೀಸ್ ಇಲಾಖೆಗೆ ಮುಸ್ಲಿಂ ಬಾಂಧವರು ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು.
ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ನೇಮಕಾತಿ ಪ್ರಕಟಣೆ

KEA ನೇಮಕಾತಿ 2026–06 ಸಹಾಯಕ (FDA, SDA) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 21, 2026 KEA ನೇಮಕಾತಿ 2026: 6 ಸಹಾಯಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಏಇಂ ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು – ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 03–ಜೂನ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 20–05–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 03–ಜೂನ್–2026 ಅಧಿಕೃತ ವೆಬ್‌ಸೈಟ್: cetonline.karnataka.gov.in

## ಕುರ್ಚಿ ಕಿತ್ತಾಟಕ್ಕೆ ಕೊನೆಗೂ ತೆರೆ, ಹೈಕಮಾಂಡ್ ಆಜ್ಞೆಗೆ ತಲೆಬಾಗಿದ ಸಿದ್ದರಾಮಯ್ಯ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಅಧಿಕಾರ ಹಂಚಿಕೆ ಮತ್ತು ನಾಯಕತ್ವ ಬದಲಾವಣೆ ವಿಚಾರವಾಗಿ ಕಾಂಗ್ರೆಸ್ ನಾಯಕರು ಹಿಂದೆಂದೂ ಇಲ್ಲದಷ್ಟು ಗೌಪ್ಯತೆ ಕಾಪಾಡಿಕೊಳ್ಳುವ ಮೂಲಕ ಶಿಸ್ತು ಪಾಲನೆಯಲ್ಲಿ ಅಚ್ಚರಿ ಮೂಡಿಸಿದ್ದಾರೆ. ಹಲವಾರು ತಿಂಗಳಿನಿಂದಲೂ ಅಧಿಕಾರ ಹಂಚಿಕೆ ಎಂಬ ಚರ್ಚೆ ಕಾಂಗ್ರೆಸ್ ಆವರಣದಲ್ಲಿ ಮಾರೀಚ ಜಿಂಕೆಯಂತೆ ಸುಳಿದಾಡಿದೆ. ಅಧಿಕಾರ ಹಂಚಿಕೆ ಕುರಿತು ಒಪ್ಪಂದವಾಗಿದೆ ಎಂದು ಕೆಲವೊಮ್ಮೆ ಹೇಳಿದರೆ, ಯಾವುದೇ ಚರ್ಚೆಗಳು ನಡೆದಿಲ್ಲ ಎಂದು ಕೆಲವರು ಖಡಾಖಂಡಿತವಾಗಿ ದಾರ್ಷ್ಟ್ಯದ ಹೇಳಿಕೆಗಳನ್ನು ನೀಡುತ್ತಿದ್ದರು.**



ಸಿದ್ದರಾಮಯ್ಯ ಅವರು, ಹೈಕಮಾಂಡ್ ಹೇಳಿದಂತೆ ನಡೆದುಕೊಳ್ಳುತ್ತೇನೆ ಎನ್ನುವ ಮಾತುಗಳನ್ನೇ ನೂರಾರು ಬಾರಿ ಪುನರುಚ್ಚರಿಸಿದ್ದರು. ಯಾವುದೇ ಗುಟ್ಟು ಬಿಟ್ಟುಕೊಡದೇ ಕೊನೆಯವರೆಗೂ ರಹಸ್ಯ ಕಾಯ್ದುಕೊಂಡರು. ನಿನ್ನೆ ಜವಾಹಾರ್‌ಲಾಲ್ ನೆಹರೂ ಅವರ ಪುಣ್ಯಸರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾಗಲೂ ಸಿದ್ದರಾಮಯ್ಯ ಯಾವುದೇ ಮಾತನಾಡದೇ ನಿಮ ಮನಸ್ಸಿಗೆ ತೋಚಿದಂತೆ ಬರೆದುಕೊಳ್ಳಿ ಎಂದು ತಮ್ಮ ಪಾಡಿಗೆ ತಾವು ಹೋಗಿದ್ದರು. ಡಿ.ಕೆ.ಶಿವಕುಮಾರ್ ಕೂಡ ಒಮ್ಮೆ ಮಾತ್ರ ಬಾಯಿ ತಪ್ಪಿ ಸಿದ್ದರಾಮಯ್ಯ ಅವರನ್ನೊಳಗೊಂಡಂತೆ ನಾಲ್ಕೈದು ಜನರ ನಡುವೆ ಗುಟ್ಟಿನ ವ್ಯಾಪಾರವಾಗಿದೆ ಎಂದು ಹೇಳಿದ್ದರು. ಅನಂತರ ತಾವು ಯಾವುದೇ ಹೇಳಿಕೆ ನೀಡದೆ, ಕೈಸನ್ನೆ, ಬಾಯಿಸನ್ನೆಯಲ್ಲೇ ಪರಿಸ್ಥಿತಿಯನ್ನು ನಿಭಾಯಿಸುತ್ತಿದ್ದರು. ಬೇರೆಯವರಿಗೂ ಅಧಿಕಾರ ಹಂಚಿಕೆಯ ಬಗ್ಗೆ ಮಾತನಾಡಲು ಅವಕಾಶ ನೀಡದೆ ಶಿಸ್ತಿನ ಅಧ್ಯಕ್ಷರಾಗಿ ವರ್ತಿಸಿದರು. ದೆಹಲಿಯ ಭೇಟಿ ಬಳಿಕವಂತೂ ಕುತೂಹಲ ಕುಲುಮೆಯಂತೆ ಕುದಿಯುತ್ತಿತ್ತು. ಯಾವ ಮಾದರಿಯ ಪ್ರಶ್ನೆಗಳು ಎದುರಾದರೂ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಒಳಗೊಂಡಂತೆ ಯಾರೂ ತಮ ಹೇಳಿಕೆಗಳನ್ನು ಬದಲಿಸಲಿಲ್ಲ. ನಿನ್ನೆ ಹಿರಿಯ ಶಾಸಕರಾದ ಆರ್.ವಿ.ದೇಶಪಾಂಡೆ ಮತ್ತು ಸರ್ಕಾರದ ಮುಖ್ಯ ಸಚೇತಕ ಪಿ.ಎಂ.ಅಶೋಕ್ ಅವರು, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ನಾಳೆ ರಾಜೀನಾಮೆ ನೀಡುತ್ತಾರೆ ಎಂದು ಉತ್ಸಾಹದಲ್ಲಿ ಬಾಯಿಬಿಟ್ಟಿದ್ದರು. ಅದನ್ನು ಹೊರತು ಪಡಿಸಿದರೆ, ಉಳಿದಂತೆ ಯಾರೂ ಗುಟ್ಟು ಬಿಟ್ಟುಕೊಡಲಿಲ್ಲ. ನಿನ್ನೆ ದೆಹಲಿಗೆ ಆಗಮಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲ, ನಾಯಕತ್ವದ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ. ಕಾಂಗ್ರೆಸ್ ಪಕ್ಷದಿಂದ ಶಾಸಕಾಂಗ ಸಭೆಯನ್ನೂ ಕರೆದಿಲ್ಲ. ಮಾಧ್ಯಮಗಳಲ್ಲಿ ವರದಿಯಾಗುತ್ತಿರುವ ಎಲ್ಲವೂ ಕೇವಲ ವದಂತಿ ಎಂದಿದ್ದರು. ದೆಹಲಿಯ ಸಭೆಯಲ್ಲಿ ರಾಜ್ಯಸಭೆ ಮತ್ತು ವಿಧಾನಪರಿಷತ್ತಿನ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಮಾತ್ರ ಚರ್ಚೆಯಾಗಿದೆ. ನಾಯಕತ್ವ ಕುರಿತಂತೆ ಕಾಂಗ್ರೆಸ್ ಹೈಕಮಾಂಡ್ ಸೂಕ್ತ ಸಂದರ್ಭದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಸಾಮಥ–'ರ್ಯವೊಂದಿದೆ ಎಂದು ಹೇಳಿದ್ದರು. ಇಂದು ಬೆಳಿಗ್ಗೆ ಕೊನೆಯ ಕ್ಷಣದವರೆಗೂ ಎಲ್ಲರೂ ಹಳೆಯ ಗ್ರಾಮಾ ಫೋನ್‌ನಂತೆ ಹೇಳಿದ್ದನ್ನೇ ಹೇಳಿ ನುಣುಚಿಕೊಳ್ಳುತ್ತಿದ್ದರು. ರಾಜ್ಯಸಭೆ ಮತ್ತು ವಿಧಾನಪರಿಷತ್ತಿನ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಗಾಗಿ ಮಾತ್ರ ದೆಹಲಿಯಲ್ಲಿ ಸಭೆ ನಡೆದಿದೆ ಎಂದು ಹೇಳುತ್ತಾ ಬಂದಿದ್ದಾರೆ.

1ನೇ ಪುಟದಿಂದ....

ತಲೆಮಾರಿನ ರಾಜಕಾರಣಿಗಳು ಇವರಿಬ್ಬರನ್ನು ನೋಡಿ ಕಲಿಯಬೇಕಾದ್ದು ಬಹಳಷ್ಟಿದೆ. ವೇದಿಕೆಯ ಮೇಲಿನ ಪ್ರೀತಿ: ಯಡಿಯೂರಪ್ಪನವರ ಹುಟ್ಟುಹಬ್ಬದ ಸುವರ್ಣ ಮಹೋತ್ಸವದಲ್ಲಿ ಸಿದ್ದರಾಮಯ್ಯನವರು ಭಾಗವಹಿಸಿ, ಕೈಕೈ ಹಿಡಿದು ನಕ್ಕಾಗ ಇಡೀ ಕರ್ನಾಟಕವೇ ಹೆಮ್ಮೆ ಪಟ್ಟಿತ್ತು. ಸದನದ ಸೌಹಾರ್ದತೆ: ಬಜೆಟ್ ಮಂಡಿಸುವಾಗ ಸಿದ್ದರಾಮಯ್ಯನವರ ಆರ್ಥಿಕ ಶಿಸ್ತನ್ನು ಯಡಿಯೂರಪ್ಪ ಶ್ಲಾಘಿಸುತ್ತಿದ್ದರು. ಕೃಷಿ ಬಜೆಟ್ ತಂದ ಯಡಿಯೂರಪ್ಪನವರ ದೂರದೃಷ್ಟಿಯನ್ನು ಸಿದ್ದರಾಮಯ್ಯ ಗೌರವಿಸುತ್ತಿದ್ದರು. **ಸಮಾರೋಪ:** ಇತಿಹಾಸದ ಸುವರ್ಣ ಪುಟಗಳು ಬಿ.ಎಸ್. ಯಡಿಯೂರಪ್ಪ ಮತ್ತು ಸಿದ್ದರಾಮಯ್ಯ ಇಬ್ಬರೂ ಕರ್ನಾಟಕದ ಮಣ್ಣಿನ ಹೆಮ್ಮೆಯ ಪುತ್ರರು. ಒಬ್ಬರು ಭಾವನಾತ್ಮಕ ಜನಪ್ರಿಯತೆಯ ರಾಜನಾದರೆ, ಮತ್ತೊಬ್ಬರು ಸಿದ್ಧಾಂತ ಮತ್ತು ಬಜೆಟ್ ಜ್ಞಾನದ ಧೀಮಂತ. ಇವರಿಬ್ಬರ ರಾಜೀನಾಮೆಗಳು ಅಧಿಕಾರ ಶಾಶ್ವತವಲ್ಲ ಎಂಬುದನ್ನು ತೋರಿಸಿದರೆ, ಇವರಿಬ್ಬರ ಒಡನಾಟವು ರಾಜ–ಕೀಯದಲ್ಲಿ ಸೌಹಾರ್ದತೆಯೇ ಪರಮೋಚ್ಚ ಎಂಬುದನ್ನು ಜಗತ್ತಿಗೆ ಸಾರಿದೆ. ಇವರಿಬ್ಬರು ಸೃಷ್ಟಿಸಿದ ಇತಿಹಾಸದ ಸುವರ್ಣ ಯುಗ ಕನ್ನಡ ನಾಡಿನ ನೆನಪಿನಲ್ಲಿ ಎಂದಿಗೂ ಹಸಿರಾಗಿರುತ್ತದೆ. ಬರಹ: ವರುಣಾ ಪ್ರಕಾಶ್

# ತ್ಯಾಗ,ಸಹೋದರತ್ವದ ಸಂದೇಶ ಸಾರಿದ ಬಳಗಾನೂರಿನ ಬಕ್ರೀದ್ ಹಬ್ಬ

ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಪಟ್ಟಣದ ಮುಸಲ್ಮಾನ್ ಬಾಂಧವರು ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಗುರುವಾರ ಅತ್ಯಂತ ಭಕ್ತಿಭಾವದಿಂದ ಹಾಗೂ ಸಂಭ್ರಮ ಸಡಗರದಿಂದ ಆಚರಿಸಿದರು. ಬೆಳಗಿನ ಜಾವದಿಂದಲೇ ಪಟ್ಟಣದ ಈದ್ಗಾ ಮೈದಾನದಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಭಕ್ತರು ಅಲ್ಲಾಹನಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿ ಹಬ್ಬದ ಆಚರಣೆಗೆ ಚಾಲನೆ ನೀಡಿದರು.**

ಹಜರತ್ ಸೈಯ್ಯದ್ ಸುಲ್ತಾನ್ ಶಾ ಖಾದ್ರಿ ದರ್ಗಾದ ಸಜಾದ ನಶೀನ್ ಹಜರತ್ ಮೌಲಾನಾ ಸೈಯ್ಯದ್ ಮಹೆಮೂದ ಖಾದ್ರಿ ಬಯಾನ್ ಮಾಡಿಸಿದರು. ಮೌಲ್ವಿ ಸೈಯ್ಯದ್ ಹುಸೇನ್ ಭಾಷಾ ಮಾನ್ವಿ ನಮಾಜ್ ಮಾಡಿಸಿದರು. ಮುತವಲ್ಲಿಗಳಾದ ಹಫೀಜ್ ಸೈಯ್ಯದ್ ಅಬ್ದುಲ್ ಖಾದರ್ ಭಾಷಾ ಖುತುಬಾ ಪಠಿಸಿ ಸಾಮೂಹಿಕ ನಮಾಜ್ ನೆರವೇ–ರಿಸಿದರು.ಬಿಳಿ ಉಡುಪು ತೊಟ್ಟು ಪ್ರಾರ್ಥನೆಯ ಮನೋಭಾವದೊಂದಿಗೆ ಈದ್ಗಾ ಮೈದಾನಕ್ಕೆ



ಆಗಮಿಸಿದ್ದ ಯುವಕರು, ಹಿರಿಯರು ಹಾಗೂ ಮಕ್ಕಳು ಅಲ್ಲಾಹನಿಗೆ ಪ್ರಾರ್ಥನೆ ಸಲ್ಲಿಸಿದರು.

ನಮಾಜ್ ಬಳಿಕ ಪರಸ್ಪರ ಅಪ್ಪಿಕೊಂಡು "ಈದ್ ಮುಬಾರಕ್" ಎಂದು ಶುಭಾಶಯ ವಿನಿಮಯ ಮಾಡಿಕೊಂಡ ದೃಶ್ಯಗಳು ಸಹೋದರತ್ವ ಮತ್ತು ಸೌಹಾರ್ದತೆಯ ಸಂಕೇತವಾಗಿ ಕಂಗೊಳಿಸಿತು.ಈ ಸಂದರ್ಭದಲ್ಲಿ ಧಾರ್ಮಿಕ ಮುಖಂಡರು ಬಕ್ರೀದ್ ಹಬ್ಬದ ಮಹತ್ವವನ್ನು ವಿವರಿಸಿದರು. ಪ್ರವಾದಿ ಇಬ್ರಾಹಿಂ ಅವರು ತೋರಿದ ತ್ಯಾಗ, ನಂಬಿಕೆ ಹಾಗೂ ಬಲಿದಾನದ ಸಂದೇಶವೇ ಬಕ್ರೀದ್ ಹಬ್ಬದ ಮೂಲ ಸಾರವಾಗಿದೆ. ಮಾನವೀಯತೆ, ಸಹಕಾರ, ಬಡವರ ಮೇಲಿನ ಕರುಣೆ ಹಾಗೂ ಸಮಾಜದಲ್ಲಿ ಶಾಂತಿ ನೆಲೆಸಬೇಕೆಂಬ ಸಂದೇಶವನ್ನು ಈ ಹಬ್ಬ ಸಾರುತ್ತದೆ ಎಂದು ತಿಳಿಸಿದರು.

ಹಬ್ಬದ ಅಂಗವಾಗಿ ಮನೆಗಳಲ್ಲಿ ವಿಶೇಷ ಭೋಜನ ಸಿದ್ಧಪಡಿಸಲಾಗಿತ್ತು. ಕುಟುಂಬ ಸದಸ್ಯರು, ಬಂಧುಬಳಗ ಹಾಗೂ ಸ್ನೇಹಿತರೊಂದಿಗೆ ಸಂತೋಷದಿಂದ ಹಬ್ಬವನ್ನು ಆಚರಿಸಲಾಯಿತು. ಅನೇಕರು ಬಡವರಿಗೆ ಆಹಾರ ಹಾಗೂ ಅಗತ್ಯ ವಸ್ತುಗಳನ್ನು ವಿತ–ರಿಸುವ ಮೂಲಕ ಮಾನವೀಯತೆ ಮೆರೆದರು. ನಂತರ ಭಕ್ತರು ಹಜರತ್ ಸೈಯ್ಯದ್ ಸುಲ್ತಾನ್ ಶಾ ಖಾದ್ರಿಯವರ ಗದ್ದುಗೆಗೆ ಹೂವಿನ ಹಾರ ಹಾಕಿ ನಮಸ್ಕರಿಸಿದರು. ಇದೇ ವೇಳೆ ಜೂನ್ ತಿಂಗಳ ಹತ್ತನೇ ತಾರೀಕಿಗೆ ನಡೆಯಲಿರುವ ತಾತನವರ ಗಂಧ ಉರುಸಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ತಾತನವರ ಕೃಪೆಗೆ ಪಾತ್ರರಾಗಬೇಕೆಂದು ಸಜಾದಾ ನಶೀನ್ ಕರೆ ನೀಡಿದರು.

ಈ ಸಂದರ್ಭದಲ್ಲಿ ಹಿರಿಯರಾದ ಶೇಕ್ಷಾವಲಿ ಜಹಗೀರದ್ದಾರ್, ಮೋದಿನ್ ಪಾಷಾ ಜಹಗೀರ್ದಾರ್, ಬಾಶುಮಿಯಾ ಮುಲ್ಲಾರ್, ಹಜರತ್ ಅಲಿ ನಾಯಕ್, ಎಂ.ಡಿ. ಆಲಂ ಸಾಬ್, ಮುಜಾವರ್ ಮಗ್ದುಮ್ ಸಾಬ್, ರಜಬಲಿ ಹಾದಿಮನಿ ಸೇರಿದಂತೆ ಹಲವು ಮುಸಲ್ಮಾನ್ ಬಾಂಧವರು ಉಪಸ್ಥಿತರಿದ್ದರು.ಹಬ್ಬದ ಅಂಗವಾಗಿ ಈದ್ಗಾ ಮೈದಾನದ ಬಳಿ ಆರಕ್ಷಕರು ಸೂಕ್ತ ಬಂದೋಬಸ್ತ್ ಒದಗಿಸಿದ್ದು,ಶಾಂತಿಯುತ ಹಾಗೂ ಯಶಸ್ವಿ ಆಚರಣೆಗೆ ಸಹಕಾರಿಯಾದರು. ವರದಿ,ಸುರೇಶ ಬಳಗಾನೂರು.

# ಅರಕೇರಾ: ಬಕ್ರೀದ್ ಹಬ್ಬ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ



ನೈಜ್ಯ ದೆಸೆ ನ್ಯೂಸ್

**ಅರಕೇರಾ: ಪಟ್ಟಣದಲ್ಲಿ ತ್ಯಾಗ,ಬಲಿದಾನ ಧರ್ಮನಿಷ್ಟೆಯ ಸಂಕೇಶವಾಗಿರುವ ಬಕ್ರೀದ್ ಹಬ್ಬವನ್ನು ಮುಸ್ಲಿಂ ಸಮೂದಾಯದವರು ಶ್ರದ್ಧಾ ಭಕ್ತಿಯಿಂದ ಗುರುವಾರ ಆಚರಿಸಿದರು.**

ಮುಂಜಾನೆಯಿಂದಲ್ಲೇ ಹೊಸ ಬಟ್ಟೆಗಳನ್ನು ತೊಟ್ಟು ಮಕ್ಕಳು ,ಹಿರಿಯರು ಜಾಮೀಯ ಮಸೀದಿ ಸೇರಿದಂತೆ ಪಟ್ಟಣದಲ್ಲಿ 3 ಮಸೀದಿಯಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು ನಂತರ ಸಾವಿರಾರು ಮುಸ್ಲಿಂ ಭಾಂಧವರು ಪಟ್ಟಣದ ಹೊರವಲಯದಲ್ಲಿನ ಈದ್ಗಾ ಮ್ಯದಾನದಲ್ಲಿ ಧರ್ಮಗುರು ಅಲೀಂಖಾಜಿ,ಹುಸೇನಬಾಷ ಅವರು ತತ್ವಗಳನ್ನು ಭೋದಿಸಿದರು.ಅಲ್ಲಾಹು ಅಕ್ಬರ್ ಎಂಬ ನಾಮಸ್ಮರಣೆ ಎಲ್ಲೇಡೆ ಅನುರಣಿಸಿತು.

ಅರಕೇರಾ,ಅಗ್ರಹಾರ, ನಾಗೋಲಿ,ಪಿಲಿಗುಂಡ, ಆಲ್ಕೋಡ, ಭೂಮನಗುಂಡ ಗ್ರಾಮಸ್ಥರು ಕೂಡಾ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಪಟ್ಟಣದ ಹಿರಿಯ ಮುಖಂಡರಾದ ಸತ್ಯನಾರಾಯಣನಾಯಕ ಪೋಲಿಸ್ ಪಾಟೀಲ್ ಮಾಜಿ ಜಿಲ್ಲಾ ಪಂಚಾಯತ ಸದಸ್ಯರ ನಿವಾಸದಲ್ಲಿ ಮುಸ್ಲಿಂ ಗುರುಗಳಾದ ಅಲಿಂಖಾ–ಜಿಯವರಿಗೆ ಹುಸೇನಬಾಷ ಹಾಪಿಸಾಬ ಇಬ್ಬರನ್ನು ಸನ್ಮಾನಿಸಿ ಗೌರವಿಸಿದರು. ವಿಳ್ಯೆಬಾಬತ್ತು ನೀಡಿ ಸತ್ಕಾರಿಸಿದರು.ಜಾಮೀಯಾ ಮಸೀದಿ ಅಧ್ಯಕ್ಷ ಜಲೀಲಾಸಾಬ ಸೇರಿದಂತೆ ಸಮಾಜದ ಬಾಂಧವರು ಉಪಸ್ಥಿತರಿದ್ದರು.

ನಂತರ ಬಡವರ್ಗದವ–ರಿಗೆ ಬಟ್ಟೆ,ಆಹಾರ,ಸಾಮಾಗ್ರಿ,ಹಣವನ್ನು ದಾನವಾಗಿ ನೀಡುವ ಮೂಲಕ ಹಬ್ಬವನ್ನು ಆಚರಣೆ ಮಾಡಿದರು. ನಂತರ ಮುಸ್ಲಿಂ ಸಮೂದಾಯದವರು ಪಟ್ಟಣದಲ್ಲಿನ ಮಾಜಿ ಸಚಿವರಾದ ಕೆ.ಶಿವನಗೌಡನಾಯಕ,ಆರ್ ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಎ.ರಾಜಶೇಖರನಾಯಕ,ಕೆ, ಅನಂತರಾಜನಾಯಕ, ಮಾಜಿ ಗ್ರಾಮ ಪಂಚಾಯತ ಅಧ್ಯಕ್ಷರಾದ ತಿಮ್ಮಪ್ಪನಾಯಕ ಪೋಲಿಸ್ ಪಾಟೀಲ್.ಕಲ್ಪವೃಕ್ಷ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಬಸವರಾಜ ಪೂಜಾರಿ ಸೇರಿದಂತೆ ಪಟ್ಟಣದಲ್ಲಿ ಪ್ರಮುಖ ಮುಖಂಡರುಗಳ ಮನೆಗೆ ತೆರಳಿ ಪಟ್ಟಣದಲ್ಲಿ ಶುಭಾಶಯ ವಿನಿಮಯ ಮಾಡಿಕೊಂಡರು. ಈದ್ಗಾ ಮೈದಾನದಲ್ಲಿ ದೇವದುರ್ಗ ಪೋಲಿಸ್ ಅಧಿಕಾರಿಗಳು ಬಂದೋ ಬಸ್ತ ಏರ್ಪಡಿಸಿದರು.ಹಬ್ಬದ ಪ್ರಯುಕ್ತ ಬಂಧು ಬಾಂಧವರು,ಮಿತ್ರರನ್ನು ಮನೆಗೆ ಕರೆದುಕೊಂಡು ಹಬ್ಬದ ಊಟ ಸವಿದರು.

# ಬಕ್ರೀದ್ ಹಬ್ಬ ಪ್ರಯುಕ್ತ ಮುಸ್ಲಿಂ ಬಾಂಧವರಿಂದ ಸಮೂಹಿಕ ಪ್ರಾರ್ಥನೆ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತ್ಯಾಗ ಮತ್ತು ಬಲಿದಾನದ ಪ್ರತೀಕವಾದ ಈದ್ ಉಲ್ ಅದಾ ಬಕ್ರಿದ್ ಹಬ್ಬವನ್ನು ಮುಸ್ಲಿಂ ಬಾಂಧವರು ಸಾಮೂಹಿಕವಾಗಿ ಈದ್ಗ ಮೈದಾನದಲ್ಲಿ ಪ್ರಾರ್ಥನೆ ಸಲ್ಲಿಸುವುದರೊಂದಿಗೆ ಹಬ್ಬ ವನ್ನು ಸಂಭ್ರಮದಿಂದ ಆಚರಿಸಿದರು.**

ಪಟ್ಟಣದ ಈದ್ಗ ಮೈದಾನ ಸೇರಿದಂತೆ ವಿವಿಧ ಮಸೀದಿಗಳಲ್ಲಿ ಮುಸ್ಲಿಂ ಬಾಂಧವರು ಪ್ರಾಥನೆ ಸಲ್ಲಿಸಿ ಸಾಮೂಹಿಕವಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದ ಬಳಿಕ ಪರಸ್ಪರ ಒಬ್ಬ–ರಿಗೊಬ್ಬರು ಶುಭ ಕೋರುವ ಮೂಲಕ ಹಬ್ಬದ ಸಂಭ್ರಮವನ್ನು ಹಂಚಿಕೊಂಡರು. ಹಬ್ಬದ ಆಚರಣೆಯಲ್ಲಿ ಮಕ್ಕಳು, ಹಿರಿಯರು ವೃದ್ಧರು ಸೇರಿ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು. ಹಬ್ಬದ ಆಚರಣೆಗೆ ಅನುಕೂಲವಾಗುವಂತೆ ಮತ್ತು ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಸ್ಥಳೀಯ ಪೊಲೀಸ್ ಠಾಣಾ ಸಿ ಪಿ ಐ ಹೊಸಕೇರಪ್ಪ ರವರ ನೇತೃತ್ವದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿತ್ತು.





ಬಕ್ರೀದ್ ಹಬ್ಬದ ಹಿನ್ನಲೆ: ಪ್ರವಾದಿ ಇಬ್ರಾಹಿಂ ಅವರು ತಮ್ಮ ಪುತ್ರನನ್ನು ದೇವರಿಗೆ ಅರ್ಪಣೆ ಮಾಡಲು ಮುಂದಾದಾಗ ಮಹಮ್ಮದ್ ಪೈಗಂಬರರು ಇಬ್ರಾಹಿಂ ಪುತ್ರನನ್ನು ಬಲಿ ನೀಡದೇ ಕುರಿಯನ್ನು ಅರ್ಪಣೆ ಮಾಡುವಂತೆ ಹೇಳುತ್ತಾರೆ. ಆಗ ಕು–ರಿಯನ್ನು ಅರ್ಪಿಸುತ್ತಾರೆ. ಅಂದಿನಿಂದ ಬಕ್ರೀದ್ ಹಬ್ಬವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಬಕ್ರೀದ್ ಹಬ್ಬದಲ್ಲಿ ಮುಸಲ್ಮಾನರು ಹೆಚ್ಚಾಗಿ ದಾನ ಧರ್ಮಗಳನ್ನು ಮಾಡುವವರು. ಇಂದು ಪ್ರತಿಯೊಬ್ಬ ಮುಸಲ್ಮಾನರು ದಾನವನ್ನು ಮಾಡುತ್ತಾರೆ.

ಬಕ್ರೀದ್‌ನಲ್ಲಿ ನೀಡುವ ಬಲಿಯಲ್ಲಿ ಮೂರು ಭಾಗಗಳನ್ನು ಮಾಡಲಾಗುತ್ತದೆ. ಒಂದು ಭಾಗವನ್ನು ತಾವೇ ಇಟ್ಟುಕೊಂಡು ದಾನ ಮಾಡುವವರು, ಉಳಿದ ಎರಡು ಭಾಗಗಳಲ್ಲಿ ಒಂದು ಭಾಗವನ್ನು ಸಂಬಂಧಿಕ–ರಿಗೆ ಹಾಗೂ ಇನ್ನೊಂದು ಭಾಗವನ್ನು ಅಶಕ್ತರಿಗೆ ನೀಡಲಾಗುತ್ತದೆ. ಇದೇ ಬಕ್ರೀದ್‌ನ ವಿಶೇಷ ಎನ್ನಬಹುದು. ಪವಿತ್ರ ಹಜ್ ಯಾತ್ರೆಯು ಇಸ್ಲಾಮಿನ ವಿಶ್ವ ಭ್ರಾತತ್ವದ ಸಂಕೇತವಾಗಿ ಹಾಗೂ ಬಲಿದಾನದ ನೆನಪಿಗಾಗಿ ಬಕ್ರೀದ್ ಹಬ್ಬ ಆಚರಿಸಲಾಗುತ್ತದೆ.

# ಶಾನವಾಸಪುರದಲ್ಲಿ ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಆಚರಣೆ

ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ: ಸಮೀಪದ ಶಾನವಾಸಪುರ ಗ್ರಾಮದಲ್ಲಿ ಬಕ್ರೀದ್ ಹಬ್ಬದ ಪ್ರಯುಕ್ತ ಮೌಲಾನಾ ಅಲ್ತಾಫ್ ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಆಚರಣೆ ನಮ್ಮ ಪ್ರವಾದಿ ಇಬ್ರಾಹಿಂ ಅವರ ಮಗ ಇಸ್ಮಾಯಿಲ್ ಅವರ ತ್ಯಾಗದ ಸಂಕೇತಕ್ಕಾಗಿ ಬಕ್ರೀದ್ ಹಬ್ಬದ ಆಚರಣೆ ಎಂದು ಹೇಳಿದರು.**




ಗ್ರಾಮದ ಮುಸ್ಲಿಂ ಬಾಂಧವರು ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಮುಸ್ಲಿಂ ಬಾಂಧವರು ಪರಸ್ಪರ ಈದ್ ಹಬ್ಬದ ಶುಭಾಶಯ ಕೋರಿದರು. ಇ ಸಂದರ್ಭದಲ್ಲಿ . ಆಫಿಸಾಬ್ ಮುಜಮ್ಮಿಲ್.ಮೌಲಾನ ಆಸಿಫ್ .ಮುತ್ತಲ್ಲಿ ಅಕ್ಬರ್ಸಾಬ್.ಬಳಿಗೇರು ಪೀರಾ ಸಾಬ್.ಎಚ್ ಖಾಜಸಾಸ್. ಮಸೀದಿ ಆಲಂಸಾಬ್.ಇಸ್ಮಾಯಿಲ್ ಸಾಬ್.ಶಿರಿಗೇರಿ ಜಿಲಾನ್ .ಶಿರಿಗೇರಿ ಮಹಮ್ಮದ್ ಸಾಬ್.ಎಂ ಬಿ ರಂಜಾನ್ ಸಾಬ್.ಎಂ ಬಿ ಹೂನ್ನೂರುವಲಿ.ಶಿರಿಗೇರಿ ಖಾಸಿಂ ಸಾಬ್. ಬಾಷ.ಉಸ್ಮಾನ್ಸಾಬ್.ಮಾಬಷ.ಚಿಣಿಗಿಸಾಬ್. ಇನ್ನು ಹಲವು ಮುಖಂಡರು ಉಪಸ್ಥಿತರಿದ್ದರು. ವರದಿ : ಮಸೀದಿ, ಅಬ್ದುಲ್ ಗೌಸ್, ಸಿರುಗುಪ್ಪ

# ಜಿಲ್ಲೆಯಲ್ಲಿ 4 ತಿಂಗಳಲ್ಲಿ 1,139 ನಾಯಿ ಕಡಿತ ಪ್ರಕರಣ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ನಗರ ಸೇರಿದಂತೆ ಜಿಲ್ಲೆಯಾದ್ಯಂತ ಬೀದಿ ನಾಯಿಗಳ ಹಾವಳಿ ಹೆಚ್ಚಾಗುತ್ತಿದ್ದು, ನಾಯಿ ಕಡಿತ ಪ್ರಕರಣಗಳ ಸಂಖ್ಯೆಯೂ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಕಳೆದ ನಾಲ್ಕು ತಿಂಗಳಲ್ಲಿ ಜಿಲ್ಲೆಯಲ್ಲಿ ಒಟ್ಟು 1,139 ನಾಯಿ ಕಡಿತ ಪ್ರಕರಣಗಳು ದಾಖಲಾಗಿರುವುದು ಆತಂಕಕ್ಕೆ ಕಾರಣವಾಗಿದೆ.ಮಕ್ಕಳು ಹಾಗೂ ವಯೋವೃದ್ಧರು ಹೆಚ್ಚಾಗಿ ನಾಯಿಗಳ ದಾಳಿಗೆ ಗುರಿಯಾಗುತ್ತಿದ್ದು, ಜನರು ರಸ್ತೆಗಳಲ್ಲಿ ಸಂಚರಿಸಲು ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. 2026ರ ಜನವರಿಯಿಂದ ಏಪ್ರಿಲ್ ಅಂತ್ಯದವರೆಗೆ ದಾಖಲಾಗಿರುವ ಪ್ರಕರಣಗಳ ಪೈಕಿ ಮಕ್ಕಳ ಸಂಖ್ಯೆಯೇ ಹೆಚ್ಚಾಗಿದೆ ಎಂದು ರಿಮ್ಸ್ ಬೋಧಕ ಆಸ್ಪತ್ರೆಯ ಮೂಲಗಳು ತಿಳಿಸಿವೆ.**

ತಿಂಗಳವಾರು ಅಂಕಿ–ಅಂಶಗಳ ಪ್ರಕಾರ ಜನವರಿಯಲ್ಲಿ 285, ಫೆಬ್ರುವರಿ 232, ಮಾರ್ಚ್ 257 ಹಾಗೂ ಏಪ್ರಿಲ್‌ನಲ್ಲಿ ಅತಿ ಹೆಚ್ಚು 365 ಪ್ರಕರಣಗಳು ದಾಖಲಾಗಿವೆ. ಬೀದಿ



ನಾಯಿಗಳ ಸಂಖ್ಯೆ ನಿಯಂತ್ರಣ ತಪ್ಪಿರುವುದ–ರಿಂದ ನಗರ ಪ್ರದೇಶಗಳ ಜೊತೆಗೆ ಗ್ರಾಮೀಣ ಭಾಗಗಳಲ್ಲಿಯೂ ಜನರಲ್ಲಿ ಆತಂಕ ಹೆಚ್ಚಾಗಿದೆ. ಇದಲ್ಲದೆ ನಾಯಿಗಳು ಆಡು, ಕುರಿ, ಹಸು ಹಾಗೂ ಕೋಳಿಗಳ ಮೇಲೂ ದಾಳಿ ನಡೆಸುತ್ತಿರುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಾಕುಪ್ರಾಣಿಗಳ ರಕ್ಷಣೆ ಕೂಡ ದೊಡ್ಡ ಸವಾಲಾಗಿ ಪರಿಣಮಿಸಿದೆ. 'ನಾಯಿ ಕಡಿತ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ್ದು, ರೇಬಿಸ್ ತಡೆಗೆ ಅಗತ್ಯ ಚಿಕಿತ್ಸೆ ನೀಡಲಾಗುತ್ತಿದೆ. ನಾಯಿ ಕಡಿತವನ್ನು ನಿರ್ಲಕ್ಷ್ಯ ಮಾಡದೆ ತಕ್ಷಣ ಚಿಕಿತ್ಸೆ ಪಡೆಯಬೇಕು' ಎಂದು ರಿಮ್ಸ್ ವೈದ್ಯಾಧಿಕಾರಿ ಡಾ. ನಸೀಮ್ ಬಾನು ಹೇಳುತ್ತಾರೆ.

'ನಾಯಿ ಕಚ್ಚಿದ ತಕ್ಷಣ ಗಾಯವನ್ನು ಸೋಪು ಮತ್ತು ನೀರಿನಿಂದ ಚೆನ್ನಾಗಿ ತೊಳೆಯಬೇಕು. ಬಳಿಕ ನಂಜು ನಿರೋಧಕ ಹಚ್ಚಿ, ಅಗತ್ಯವಿದ್ದರೆ ಶುದ್ಧ ಬಟ್ಟೆಯಿಂದ ಕಟ್ಟಿಕೊಂಡು ಕೂಡಲೇ ಆಸ್ಪತ್ರೆಗೆ ತೆರಳಬೇಕು' ಎಂದು ತಿಳಿಸುತ್ತಾರೆ. ಮಹಾನಗರ ಪಾಲಿಕೆ ಹಾಗೂ ಸ್ಥಳೀಯ ಸಂಸ್ಥೆಗಳು ಬೀದಿ ನಾಯಿಗಳ ಸಂತಾನೋತ್ಪತ್ತಿ ನಿಯಂತ್ರಣ, ಲಸಿಕೆ ಕಾರ್ಯಕ್ರಮ, ನಾಯಿಗಳನ್ನು ಸುರಕ್ಷಿತವಾಗಿ ಹಿಡಿದು ಸ್ಥಳಾಂತರಿಸುವ ಕಾರ್ಯವನ್ನು ಚುರುಕುಗೊಳಿಸಬೇಕು ಎಂದು ಒತ್ತಾಯಿಸುತ್ತಾರೆ ಕುಲಸುಂಬಿ ಕಾಲೊನಿಯ ನಿವಾಸಿ ಸುರೇಶ. ಕಸ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ವಹಿಸುತ್ತಿರುವ ಕಾರಣ ನಾಯಿಗಳ ಸಂಖ್ಯೆ ಹೆಚ್ಚುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ. ಸಾರ್ವಜನಿಕರ ಸುರಕ್ಷತೆಗಾಗಿ ಜಿಲ್ಲಾಡಳಿತ, ಆರೋಗ್ಯ ಇಲಾಖೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ, ಬೀದಿ ನಾಯಿಗಳ ಹಾವಳಿ ತಡೆಗೆ ಶಾಶ್ವತ ಪರಿಹಾರ ಕಂಡುಹಿಡಿಯಬೇಕು ಎಂದು ಸುರೇಶ ಆಗ್ರಹಿಸುತ್ತಾರೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

# ಐಟಿಐ ವೆಲ್ಡರ್

ಐಟಿಐ ವೆಲ್ಡರ್ (ITI Welder) ಕೋರ್ಸ್ ಒಂದು ವರ್ಷದ ಅವಧಿಯ ತಾಂತ್ರಿಕ ಕೋರ್ಸ್ ಆಗಿದ್ದು, ಲೋಹಗಳನ್ನು ಜೋಡಿಸುವ (Welding) ಕೌಶಲ್ಯವನ್ನು ಕಲಿಸುತ್ತದೆ. ಇದು ಓಅಗಿಖ ಅಥವಾ ಖಅಗಿಖ ಮಾನ್ಯತೆ ಪಡೆದಿದ್ದು, ಕೈಗಾರಿಕೆಗಳಲ್ಲಿ ವೆಲ್ಡರ್ ಆಗಿ ಉದ್ಯೋಗಾವಕಾಶ ನೀಡುತ್ತದೆ. ವೆಲ್ಡರ್ ಕೋರ್ಸ್ ವಿವರಗಳು:ಕೋರ್ಸ್ ಅವಧಿ: 1 ವರ್ಷ (2 ಸೆಮಿಸ್ಟರ್‌ಗಳು).ಅರ್ಹತೆ: 8ನೇ ಅಥವಾ 10ನೇ ತರಗತಿ ಉತ್ತೀರ್ಣರಾಗಿರಬೇಕು (ಸಂಸ್ಥೆಗಳನ್ನು ಅವಲಂಬಿಸಿ). ವಯೋಮಿತಿ: ಸಾಮಾನ್ಯವಾಗಿ 14 ವರ್ಷ ಮೇಲ್ಪಟ್ಟವರು. ಕಲಿಯುವ ವಿಷಯಗಳು: ಗ್ಯಾಸ್ ವೆಲ್ಡಿಂಗ್, ಆರ್ಕ್ ವೆಲ್ಡಿಂಗ್, ಸುರಕ್ಷತಾ ನಿಯಮಗಳು, ಲೋಹಗಳ ಕತ್ತ–ರಿಸುವಿಕೆ (Cutting), ಮತ್ತು ತಾಂತ್ರಿಕ ಚಿತ್ರಣ (Technical Drawing).ಉದ್ಯೋಗಾವಕಾಶಗಳು: ಉತ್ಪಾದನಾ ಘಟಕಗಳು, ವಾಹನ ಉದ್ಯಮ (Automotive), ಹಡಗು ನಿರ್ಮಾಣ, ನಿರ್ಮಾಣ ಕ್ಷೇತ್ರ (Construction), ಮತ್ತು ಸ್ವಯಂ ಉದ್ಯೋಗ.ಪ್ರವೇಶಾತಿ: ಸರ್ಕಾರಿ ಐಟಿ–ಐಗಳಲ್ಲಿ ಕಡಿಮೆ ಶುಲ್ಕಕ್ಕೆ ಮತ್ತು ಖಾಸಗಿ ಐಟಿಐಗಳಲ್ಲಿ ನೇರ ಪ್ರವೇಶ ಪಡೆಯಬಹುದು.ಅಗತ್ಯ ದಾಖಲೆಗಳು:8ನೇ/10ನೇ ತರಗತಿ ಅಂಕಪಟ್ಟಿಆಧಾರ್ ಕಾರ್ಡ್ಜಾತಿ ಮತ್ತು ಆದಾಯ ಪ್ರಮಾಣಪತ್ರಫೋಟೋಗಳುಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಐಟಿಐ ಇಲಾಖೆಯ ಅಧಿಕೃತ ವೆಬ್‌ಸೈಟ್ ಅಥವಾ ಹತ್ತಿರದ ಸರ್ಕಾರಿ ಐಟಿಐಗೆ ಭೇಟಿ ನೀಡಿ.

## ರಾಜ್ಯದಲ್ಲಿ ಇನ್ಮುಂದೆ ಡಿಕೆಶಿ ದರ್ಬಾರ್

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಹಲವು ದಿನಗಳಿಂದ ಗೊಂದಲಕಾರಿಯಾಗಿದ್ದ ನಾಯಕತ್ವ ಬದಲಾವಣೆಗೆ ಅಧಿಕೃತವಾಗಿ ತೆರೆ ಬಿದ್ದಿದ್ದು, ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ. ಜೊತೆಯಲ್ಲೇ ಮುಂದಿನ ಮುಖ್ಯಮಂತ್ರಿ ಯಾಗಿ ಡಿ.ಕೆ. ಶಿವಕುಮಾರ್ ಅವರು ಜವಾಬ್ದಾರಿ ನಿರ್ವಹಿಸಲಿದ್ದಾರೆ ಎಂದು ಪ್ರಕಟಿಸಿದ್ದಾರೆ.**



ಸಚಿವರ ಉಪಾಹಾರ ಕೂಟದಲ್ಲಿ ಸಿದ್ದರಾಮಯ್ಯ ಅವರು ಮಾತನಾಡಿ, ತಮ ನಿರ್ಧಾರವನ್ನು ಅಧಿಕೃತವಾಗಿ ಪ್ರಕಟಿಸಿದ್ದಾರೆ. ಉಪಾಹಾರ ಕೂಟ ಮುಗಿಸಿ ಹೊರ ಬಂದ ಸಚಿವರ ಪೈಕಿ ಬಹುತೇಕರು ಮಾಹಿತಿ ನೀಡಿದ್ದು, ಇಂದು ಮಧ್ಯಾಹ್ನ 2.30ಕ್ಕೆ ಸಿದ್ದರಾಮಯ್ಯ ಅವರು ರಾಜ್ಯಪಾಲರ ಕಾರ್ಯದರ್ಶಿ ಆರ್. ಪ್ರಭುಶಂಕರ್ ಅವ–ರಿಗೆ ತಮ ರಾಜೀನಾಮೆ ಪತ್ರವನ್ನು ನೀಡಲಿದ್ದಾರೆ ಎಂದು ಸ್ಪಷ್ಟ ಪಡಿಸಿದರು. ಸಚಿವರನ್ನು ಉದ್ದೇಶಿಸಿ ಮಾತನಾಡುವಾಗ ಸಿದ್ದರಾಮಯ್ಯ ಅವರು ಅಧಿಕಾರ ತ್ಯಾಗ ಮಾಡುವ ಭಾವೋದ್ವೇಗದಲ್ಲಿ ಕಣ್ಣೀರು ಹಾಕಿದ್ದರು ಎಂದು ತಿಳಿದು ಬಂದಿದೆ. ರಾಜೀನಾಮೆ ನೀಡಿದ ನಂತರ ಡಿ.ಕೆ.ಶಿವಕುಮಾರ್ ಅವರ ಜೊತೆ ಜಂಟಿ ಪತ್ರಿಕಾಗೋಷ್ಠಿ ನಡೆಸಿ, ಬಳಿಕ ಸಿದ್ದರಾಮಯ್ಯ ದೆಹಲಿಗೆ ತೆರಳಲಿದ್ದಾರೆ ಎಂದು ತಿಳಿಸಿದ್ದಾರೆ. ಉಪಾಹಾರ ಕೂಟದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ದೆಹಲಿಯಲ್ಲಿ ಹೈಕಮಾಂಡ್ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ಸಿದ್ದರಾಮಯ್ಯ ಚರ್ಚೆ ನಡೆಸಿದ ವೇಳೆ ರಾಜೀನಾಮೆ ನೀಡುವಂತೆ ಸಲಹೆ ನೀಡಲಾಗಿದೆ. ಅದರಂತೆ ಸಿದ್ದರಾಮಯ್ಯ ಅವರು ಇಂದು ಮಧ್ಯಾಹ್ನ ಲೋಕಭವನಕ್ಕೆ ತೆರಳಿ ತಮ ರಾಜೀನಾಮೆ ಸಲ್ಲಿಸಲಿದ್ದಾರೆ ಎಂದು ತಿಳಿಸಿದರು. ಇದೇ ವೇಳೆ ಸಿದ್ದರಾಮಯ್ಯ ಅವರು, ಡಿ.ಕೆ.ಶಿವಕುಮಾರ್ ಹೊಸ ಮುಖ್ಯಮಂತ್ರಿಯಾಗಿ ಕೆಲಸ ಮಾಡಲಿದ್ದಾರೆ ಎಂದು ಘೋಷಿಸಿರುವುದಾಗಿಯೂ ಖಚಿತ ಪಡಿಸಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್‌ಗುಂಡೂರಾವ್ ಅವರು ಮಾತನಾಡಿ, ಮುಖ್ಯಮಂತ್ರಿ ಎಲ್ಲಾ ಸಚಿವರಿಗೂ ಧನ್ಯವಾದ ಹೇಳಿದರು. ಅರ್ಥಪೂರ್ಣ ಹಾಗೂ ಅದ್ಭುತವಾಗಿ ಮುಕ್ತ ಮನಸ್ಸಿನಿಂದ ಮಾತನಾಡಿದ್ದಾರೆ. ಎಲ್ಲರೂ ಮುಂದಿನ ಭವಿಷ್ಯಕ್ಕಾಗಿ ಸಜ್ಜಾಗುವಂತೆ ಕರೆ ನೀಡಿದ್ದಾರೆ ಹಾಗೂ ಪಕ್ಷದ ಜೊತೆಗೆ ತಾವೂ ಎಲ್ಲಾ ರೀತಿಯ ಹೋರಾಟಕ್ಕೆ ಕೈಜೋಡಿಸುವುದಾಗಿ ಸ್ಪಷ್ಟಪಡಿಸಿದ್ದಾರೆ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ಸಿದ್ದರಾಮಯ್ಯ ಅವರು ಮಧ್ಯಾಹ್ನ ರಾಜ್ಯಪಾಲರ ಕಾರ್ಯದರ್ಶಿಯವರಿಗೆ ರಾಜೀನಾಮೆ ನೀಡಲಿದ್ದಾರೆ. ನಮನ್ನು ಧನ್ಯವಾದ ಹೇಳಲು ಕರೆದಿದ್ದರು ಎಂದು ತಿಳಿಸಿದರು. ಮುಂದಿನ ಮುಖ್ಯಮಂತ್ರಿ ಯಾರು ಎಂಬ ಪ್ರಶ್ನೆಗೆ ಅದು ಇನ್ನೂ ತೀರ್ಮಾನವಾಗಿಲ್ಲ ಎಂದರು. ಸಿದ್ದರಾಮಯ್ಯ ಅವರು, ಡಿ.ಕೆ.ಶಿವಕುಮಾರ್ ಅವರ ಹೆಸರನ್ನು ಘೋಷಿಸಿದ್ದಾರೆ ಎಂಬುದಕ್ಕೆ ನೀವು ಹಾಗೇ ಎಂದುಕೊಳ್ಳಿ ಎಂದು ಹೇಳಿ ತೆರಳಿದರು. ಇದಕ್ಕೂ ಮುನ್ನ ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜ್ ಯಾವುದೇ ಮಾಹಿತಿ ನೀಡಲು ನಿರಾಕರಿಸಿದರು. ಮಧ್ಯಾಹ್ನ 3 ಗಂಟೆಗೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರು ಜಂಟಿ ಸುದ್ದಿಗೋಷ್ಠಿ ನಡೆಸಲಿದ್ದಾರೆ.

## ಸೇವಾ ಕಾರ್ಯಕ್ರಮಗಳ ಮೂಲಕ ಗಾಂಧಿನಗರದಲ್ಲಿ ಡಾ.ಎನ್‌ಟಿಆರ್ 103ನೇ ಜಯಂತ್ಯುತ್ಸವ ಆಚರಣೆ.

❏ ನೈಜ್ಯ ದೆಸೆ ನ್ಯೂಸ್

**ಅಖಂಡ ಭೂಮಿ ಫೌಂಡೇಶನ್ ಅಧ್ಯಕ್ಷರಾದ ನೆಕ್ಕಂಟಿ ಸುರೇಶ ಅವರ ನೇತೃತ್ವದಲ್ಲಿ ವನಸಿರಿ ಫೌಂಡೇಶನ್, ವಿಶ್ವೇಶ್ವರ ಸೇವಾ ಸಮಿತಿ ಹಾಗೂ ವಿವಿಧ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಮೇ.28 ರಂದು ನಟ ಸಾರ್ವಭೌಮ ಡಾ.ನಂದಮೂರಿ ತಾರಕ ರಾಮಾರಾವ್ ಅವರ 103ನೇ ಜಯಂತಿಯನ್ನು ಗಾಂಧಿನಗರದ ಶಿವಾಲಯ ದೇವಾಲಯದಲ್ಲಿ ಅತ್ಯಂತ ಅರ್ಥ ಪೂರ್ಣವಾಗಿ ಆಚರಿಸಲಾಯಿತು.**

ಈ ಕಾರ್ಯಕ್ರಮದಲ್ಲಿ ಶಿವಾಲಯ ದೇವಸ್ಥಾನದಿಂದ ಗೊರೇಬಾಳ ಕ್ಯಾಂಪಿನ ರಸ್ತೆಯವರೆಗೂ ಸಾಲು ಸಸಿ ನೆಟ್ಟು, ಹಾಗೂ ಶಿವಾಲಯ ದೇವಸ್ಥಾನದ ಬಳಿ ಪಂಚವಟಿ ಸಸಿಗಳನ್ನು ನೆಡುವುದರ ಮೂಲಕ ಗೌರವ ಸಲ್ಲಿಸಲಾಯಿತು. ಪ್ರತಿದಿನ ದಿನಪತ್ರಿಕೆಗಳನ್ನು ಮಳೆ, ಚಳಿ ಎನ್ನದೆ ಮನೆಮನೆಗೆ ಹಂಚುತ್ತಲೇ ಓದುವ ಬಡ ಯುವಕರಿಗೆ ಉಚಿತವಾಗಿ ಸೈಕಲ್ ವಿತರಣೆ ಮಾಡಿ ಶಿಕ್ಷಣ–



ಕ್ಕೆ ಆಸರೆ ಆದರು. ಜೊತೆಗೆ ಎನ್ ಟಿಆರ್ ಅಭಿಮಾನಿಗಳಿಂದ ರಕ್ತದಾನ ಶಿಬಿರ ನಡೆಯಿತು.

ಇದೇವೇಳೆ ಡಾ.ರಾಜಕುಮಾರ ಅವರ ಭಾವಚಿತ್ರಕ್ಕೂ ಕೂಡ ಪುಷ್ಪನಮನ ಸಲ್ಲಿಸುವ ಮೂಲಕ ಗೌರವ ಸಲ್ಲಿಸಿ, ಕೊಲ್ಲ ಶೇಷಗಿ–ರಿರಾವ್ ಹಾಗೂ ಬಿಜೆಪಿ ಮುಖಂಡ ಕೆ.ಕ–ರಿಯಪ್ಪ, ಕಾಂಗ್ರೆಸ್ ಮುಖಂಡ ಸೋಮನಗೌಡ ಬಾದರ್ಲಿ, ಜೆಡಿಎಸ್ ಮುಖಂಡ ಬಸವರಾಜ ನಾಡಗೌಡ ಮಾತನಾಡಿ, ಆಂದ್ರದಲ್ಲಿ ಎನ್ ಟಿಆರ್, ಕರ್ನಾಟಕದಲ್ಲಿ ಡಾ. ರಾಜಕುಮಾರ ದಕ್ಷಿಣ ಭಾರತ ಚಿತ್ರರಂಗದ ಎರಡು ಕಣ್ಣುಗಳಿದ್ದಂತೆ, ಎಂದು ಅಭಿಪ್ರಾಯ ಪಟ್ಟರು. ಎನ್‌ಟಿಆ–ರ್ ಸಿಎಂ ಆಗಿದ್ದ ವೇಳೆ ಜಾರಿಗೆ ತಂದ ಅನೇಕ ಯೋಜನೆಗಳ ಸುಧಾರಣೆ ಇಂದು ದೇಶದಾದ್ಯಂತ ಅನುಸರಿಸಲಾಗುತ್ತಿದೆ. ಅವರ ಹೆಸರಿನಲ್ಲಿ ಸಸಿ ನೆಟ್ಟು ಪೋಷಿಸುವುದು ಅಖಂಡ ಭೂಮಿ ಫೌಂಡೇಶನ್ ಅಧ್ಯಕ್ಷ ನೆಕ್ಕಂಟಿ ಸುರೇಶರವರು ಮಾಡುತ್ತಿರುವುದು ಉತ್ತಮ ಕಾರ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ: ಡಾ.ಚೆನ್ನನಗೌಡ, ಡಾ.ಶರಣಬಸವ ದೇವಿರೆಡ್ಡಿ, ಅರಣ್ಯ ಅಧಿಕಾರಿ ಬಸವನಗೌಡ ಅಳ್ಳಿಪುರ, ಕಮ್ಮವಾರಿ ಸಂಘದ ಅಧ್ಯಕ್ಷ ಬೂರುಗುಪಳ್ಳಿ ಶ್ರೀಹರ್ಷ, ತಾಲೂರಿ ಸುಬ್ಬರಾವ್, ಅಮರೇಗೌಡ ಮಲ್ಲಾಪುರ, ಲಯನ್ಸ್ ಕ್ಲಬ್ ಅಧ್ಯಕ್ಷ ವೆಂಕಟೇಶ ಹಾಗೂ ವಿಶ್ವ ಹಿಂದೂ ಪರಿಷತ್ ಪದಾಧಿಕಾರಿ ಶ್ರೀನಿವಾಸ ದೇವಸ್ಥಾನದ ಪದಾಧಿಕಾರಿಗಳು, ಹಿರಿಯರು, ಯುವಕರು, ಉಪಸ್ಥಿತರಿದ್ದರು.

## ಗೊಬ್ಬರದ ಬೆಲೆ ಏರಿಕೆ ವಾಪಸ್ ಪಡೆಯಿರಿ: ರಾಜ್ಯ ರೈತ ಸಂಘ ಮನವಿ




❏ ನೈಜ್ಯ ದೆಸೆ ನ್ಯೂಸ್

ರಾಯಚೂರು: 'ರಾಜ್ಯ ಸರ್ಕಾರ ರಸಗೊಬ್ಬರ ಬೆಲೆ ಏರಿಸಿರುವುದನ್ನು ವಾಪಸ್ ಪಡೆಯಬೇಕು. ರಸಗೊಬ್ಬರದ ಮೇಲಿನ ಸಬ್ಸಿಡಿ ಹೆಚ್ಚಿಸಬೇಕು. ರಿಯಾಯಿತಿ ದರದಲ್ಲಿ ಗೊಬ್ಬರ ಒದಗಿಸಬೇಕು' ಎಂದು ಒತ್ತಾಯಿಸಿ ರಾಜ್ಯ ರೈತ ಸಂಘದ ಜಿಲ್ಲಾ ಘಟಕದ ಪದಾಧಿಕಾರಿಗಳು ಜಿಲ್ಲಾಧಿಕಾರಿ ಪೂವಿತಾ ಎಸ್. ಅವರಿಗೆ ಬುಧವಾರ ಮನವಿ ಪತ್ರ ಸಲ್ಲಿಸಿದರು.

'ರೈತರು ತಮಗೆ ಬೇಕಾದ ಗೊಬ್ಬರ ಕೇಳಿದಾಗ ಡೀಲರ್‌ಗಳು ಕಡ್ಡಾಯವಾಗಿ ಬೇರೆ ಗೊಬ್ಬರ ಅಥವಾ ಕೀಟನಾಶಕಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸುವುದನ್ನು ನಿಲ್ಲಿಸಿ, ರೈತರು ಕೇಳಿದ ಗೊಬ್ಬರವನ್ನೇ ಪೂರೈಸಬೇಕು' ಎಂದು ಒತ್ತಾಯಿಸಿದರು. 'ಗೊಬ್ಬರದ ಕೃತಕ ಅಭಾವ ಸೃಷ್ಟಿಸಿ, ಕಾಳಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆ ಏರಿಸಿರುವುದನ್ನು ವಾಪಸ್ ಪಡೆಯಬೇಕು. ರಿಯಾಯಿತಿ ದರದಲ್ಲಿ ಕೃಷಿ ಚಟುವಟಿಕೆಗೆ ಡೀಸೆಲ್ ಪೂರೈಸಬೇಕು' ಎಂದು ಆಗ್ರಹಿಸಿದರು.

'ಪೋಡಿ ದುರಸ್ತಿ ಕಾಗದ ಪತ್ರ ಕಾಲಮಿತಿಯೊಳಗೆ ಪೂರೈಸಬೇಕು. ಪರವಾನಗಿ ಹೊಂದಿದ ಭೂಮಾಪಕರ ನ್ಯಾಯಯುತ ಬೇಡಿಕೆಗಳನ್ನು ಈಡೇ–ರಿಸಬೇಕು' ಎಂದು ಆಗ್ರಹಿಸಿದರು. ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪ್ರಭಾಕರ ಪಾಟೀಲ ಇಂಗಳದಾಳ, ಸೂಗೂರಯ್ಯ ಆರ್.ಎಸ್.ಮಠ, ಬೂದೆಯ್ಯ ಸ್ವಾಮಿ ಗಟ್ಟೂರು, ಲಿಂಗಾರೆಡ್ಡಿ ಪಾಟೀಲ, ಲಕ್ಷ್ಮಣ ಯಕ್ಲಾಸಪುರ, ಗೋವಿಂದ ನಾಯಕ, ಬ್ರಹ್ಮಯ್ಯ ಆಚಾರ್, ಮಲ್ಲಯ್ಯ, ಗೋಕುಲ್ ಸಾಬ್, ವಿಠಲ್ ಉಪಸ್ಥಿತರಿದ್ದರು.

# "ಡೀಸೆಲಗಾಗಿ ರೈತರ ಪರದಾಟ"

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲ್ಲೂಕಿನಲ್ಲಿ ಮುಂಗಾರು ಬಿತ್ತನೆಗಾಗಿ ಕೃಷಿ ಚಟುವಟಿಕೆಗಳನ್ನು ಆರಂಭಿಸಿರುವ ರೈತರು ಡೀಸೆಲ್‌ಗಾಗಿ ಪರದಾಡುವಂತಾಗಿದೆ. ಪಟ್ಟಣ ಸೇರಿದಂತೆ ತಾಲ್ಲೂಕಿನ ಗ್ರಾಮೀಣ ಭಾಗದ ಪೆಟ್ರೋಲ್ ಬಂಕ್‌ಗಳಲ್ಲಿ ಮಂಗಳವಾರ ಡೀಸೆಲ್ ಕೊರತೆ ಕಂಡುಬಂದಿತು. ಕಾರಣ ತಮ್ಮ ವಾಹನಗಳು ಹಾಗೂ ಕ್ಯಾನ್‌ಗಳ ಜೊತೆಗೆ ಪಟ್ಟಣದ ಪೆಟ್ರೋಲ್ ಬಂಕ್‌ಗಳಿಗೆ ಧಾವಿಸಿದ್ದ ನೂರಾರು ರೈತರು ಮಧ್ಯರಾತ್ರಿಯವರೆಗೂ ಡೀಸೆಲ್‌ಗಾಗಿ ಕಾದ ಘಟನೆ ನಡೆಯಿತು.**

ಟ್ರ್ಯಾಕ್ಟರ್, ಪಂಪ್‌ಸೆಟ್ ಹಾಗೂ ಕೃಷಿ ಯಂತ್ರೋಪಕರಣಗಳಿಗೆ ಡೀಸೆಲ್ ಅವಶ್ಯಕವಾಗಿರುವ ಕಾರಣ ರೈತರು ಹಲವು ಗಂಟೆಗಳ ಕಾಲ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಡೀಸೆಲ್ ದರ ಹೆಚ್ಚಳ ಹಾಗೂ ಕೆಲ ಪೆಟ್ರೋಲ್ ಬಂಕ್‌ಗಳಲ್ಲಿ ಡೀಸೆಲ್ ಸೀಮಿತ ಪ್ರಮಾಣದಲ್ಲಿ ವಿತ–



ರಿಸುತ್ತಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ. 'ಉತ್ತಮ ಮಳೆಯಿಂದಾಗಿ ಕೃಷಿ ಚಟುವಟಿಕೆ ಆರಂಭಿಸಲಾಗಿದೆ. ಡೀಸೆಲ್ ಬೆಲೆ ಏರಿಕೆಯಾಗಿದ್ದ–ರಿಂದ ಟ್ರ್ಯಾಕ್ಟರ್ ಬಾಡಿಗೆ ಹೆಚ್ಚಾಗಿದೆ. ?800 ಬಾಡಿಗೆ, ಡ್ರೈವರ್ ಭತ್ಯೆ 100 ನೀಡಬೇಕು.

ಸರ್ಕಾರ ಮುಂಗಾರು ಬಿತ್ತನೆ ವೇಳೆ ಡೀಸೆಲ್ ಬೆಲೆ ಹೆಚ್ಚಳ ಮಾಡಿದ್ದರಿಂದ ರೈತರು ತೊಂದರೆ ಅನುಭವಿಸಬೇಕಾಗಿದೆ' ಎಂದು ನೀರಮಾನ್ವಿ ಗ್ರಾಮದ ರೈತ ಅಮರೇಶ ಅಸಮಾದಾನ ವ.ಕ ಪಡಿಸಿದರು.

ಹಟ್ಟಿ ಚಿನ್ನದ ಗಣಿ: ಪಟ್ಟಣದಲ್ಲಿ ಕಳೆದ ಮೂರು ದಿನಗಳಿಂದ ಪೆಟ್ರೋಲ್ ಬಂಕ್‌ಗಳಲ್ಲಿ ಇಂಧನ ಕೊರತೆ ಎದುರಾಗಿದ್ದು, ವಾಹನ ಸವಾರರು ಪರದಾಡುತ್ತಿದ್ದಾರೆ. ಪಟ್ಟಣದಲ್ಲಿರುವ ಮೂರೂ ಪೆಟ್ರೋಲ್ ಬಂಕ್‌ಗಳಲ್ಲಿಯೂ ಸಮಸ್ಯೆ ತಲೆ ಎತ್ತಿದೆ. ರಸ್ತೆ ಮೇಲೆ ವಾಹನಗಳ ಓಡಾಟಕ್ಕೂ ಬ್ರೇಕ್ ಬಿದ್ದಿದೆ. ಯಾವುದೇ ಬಂಕ್‌ಗೆ ತೆರಳಿದರೂ ಸರದಿ ಸಾಲಿನ ಜೊತೆಯಲ್ಲಿ ಡೀಸೆಲ್ ತುಂಬಿಸಿಕೊಳ್ಳಲು ಕ್ಯಾನ್‌ಗಳನ್ನು ಹಿಡಿದು ಜನ ಮುಗಿ ಬಿದ್ದಿರುವುದು ಕಂಡು ಬರುತ್ತದೆ.

ಆನ್ವರಿ, ಗೆಜ್ಜಲಗಟ್ಟಾ, ಗುರುಗುಂಟಾ, ಯಲಗಟ್ಟಾ, ಮಾಚನೂರು, ಗೌಡೂರು, ನಿಲೋಗಲ್, ರೋಡಲಬಂಡ ಸೇ–ರಿದಂತೆ ಪಕ್ಕದ ಹಳ್ಳಿಗಳ ರೈತರೂ ಇಂಧನಕ್ಕೆ ಪಟ್ಟಣವನ್ನೇ ಅವಲಂಬಿಸಿದ್ದಾರೆ. ರೈತರು ಕವಿತಾಳ ಪಟ್ಟಣ, ಲಿಂಗಸುಗೂರು, ಸಿರವಾರ, ದೇವದುರ್ಗ ತಾಲ್ಲೂಕುಗಳಿಗೆ ಬೈಕ್‌ನಲ್ಲಿ ತೆರಳಿ ಡೀಸೆಲ್ ತರುತ್ತಿದ್ದಾರೆ. ವಾಹನ ಸವಾರರು ಸರದಿ ಸಾಲಿನಲ್ಲಿ ಕ.ಮೀಗಟ್ಟಲೇ ರಸ್ತೆ ಮೇಲೆ ನಿಲ್ಲುತ್ತಿರುವುದು ಸಾಮಾನ್ಯವಾಗಿದೆ. ಇದರಿಂದ ಸಾರ್ವಜನಿಕರು ಇಂಧನ ಪಡೆಯಲು ಹರಸಾಹಸ ಪಡುತ್ತಿದ್ದಾರೆ ಎನ್ನುತ್ತಾರೆ ಸಾರ್ವಜನಿಕರು. ಬಂಕ್ ಬಂದ್: ಇಂಧನ ಇಲ್ಲದ ಕಾರಣ ಪಟ್ಟಣದ ಮೂರು ಬಂಕ್‌ಗಳನ್ನು ಬಂದು ಮಾಡಲಾಗಿದೆ. ಜನರು ವಿಚಾರಿಸಿದರೆ, ನಾಳೆ ಬನ್ನಿ ಎಂದು ಬಂಕ್ ಸಿಬ್ಬಂದಿ ಸಬೂಬು ಹೇಳಿ ಸಾಗ ಹಾಕುತ್ತಿದ್ದಾರೆ.

## ತ್ಯಾಗ–ಬಲಿದಾನದ ಸಂಕೇತ ಬಕ್ರೀದ್ ಹಬ್ಬ: ಬದಾಮಿಯಲ್ಲಿ ಅದ್ದೂರಿ ಆಚರಣೆ



❏ ನೈಜ್ಯ ದೆಸೆ ನ್ಯೂಸ್

**ಬದಾಮಿ: ತ್ಯಾಗ ಮತ್ತು ಬಲಿದಾನದ ಸಂದೇಶ ಸಾರುವ ಪವಿತ್ರ ಬಕ್ರೀದ್ ಹಬ್ಬವನ್ನು ಬಾಗಲಕೋಟೆ ಜಿಲ್ಲೆಯ ಬದಾಮಿ ತಾಲೂಕಿನಲ್ಲಿ ಶಾಂತಿಯುತವಾಗಿ ಹಾಗೂ ಅದ್ದೂರಿಯಾಗಿ ಆಚರಿಸಲಾಯಿತು.**

ಪಟ್ಟಣದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು, ಸಮಾಜದ ಹಿರಿಯ ಮುಖಂಡರು, ಅಂಜೂಮನ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು ಹಾಗೂ ಸದಸ್ಯರು ದೊಡ್ಡ ಸಂಖ್ಯೆಯಲ್ಲಿ ಭಾಗಿಯಾಗಿ ವಿಶೇಷ ನಮಾಜ್ ಸಲ್ಲಿಸಿದರು. ಈ ವೇಳೆ ದೇಶದ ಸುಖ ಶಾಂತಿ, ಸೌಹಾರ್ದತೆ ಹಾಗೂ ಸಮೃದ್ಧಿಗಾಗಿ ಅಲ್ಲಾಹನಲ್ಲಿ ವಿಶೇಷ ದುವಾ ಮಾಡಲಾಯಿತು.


ಹಬ್ಬದ ಅಂಗವಾಗಿ ಪರಸ್ಪರ ಕೈಕುಲುಕಿ ಬಕ್ರೀದ್ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡ ಜನರು ಪ್ರೀತಿ, ವಾತ್ಸಲ್ಯ ಮತ್ತು ಸಹೋದರತ್ವದ ಸಂದೇಶವನ್ನು ಸಾರಿದರು. ಬಳಿಕ ತಮ್ಮ ತಮ್ಮ ಮನೆಗಳಿಗೆ ತೆರಳಿ ಸಿಹಿ ತಿಂಡಿಗಳನ್ನು ಹಂಚಿಕೊಂಡು ಹಬ್ಬದ ಸಂಭ್ರಮದಲ್ಲಿ ಭಾಗಿಯಾದರು. ಬಕ್ರೀದ್ ಹಬ್ಬವು ತ್ಯಾಗ, ಮಾನವೀಯತೆ ಮತ್ತು ಸಹಬಾಳ್ವೆಯ ಪ್ರತೀಕವಾಗಿದ್ದು, ಬದಾಮಿಯಲ್ಲಿ ಹಬ್ಬದ ಸಂಭ್ರಮ ಎಲ್ಲೆಡೆ ಮನೆಮಾಡಿತ್ತು. ವರದಿ :ಎ ಜೆ ಮನಿಯಾರ

# ಪೆಟ್ರೋಲ್, ಡೀಸೆಲ್ ಅಭಾವ ಇಲ್ಲ: ತಹಶೀಲ್ದಾರರಿಂದ ಬಂಕ್‌ಗಳಿಗೆ ಭೇಟಿ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಮಾನ್ಯ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ತಹಶೀಲ್ದಾರರು ತಾಲೂಕಿನ ವಿವಿಧ ಪೆಟ್ರೋಲ್ ಬಂಕ್‌ಗಳು ಹಾಗೂ ಗ್ಯಾಸ್ ಏಜೆನ್ಸಿಗಳಿಗೆ ಭೇಟಿ ನೀಡಿ ಪೆಟ್ರೋಲ್, ಡೀಸೆಲ್ ಹಾಗೂ ಎಲ್.ಪಿ.ಜಿ ಗ್ಯಾಸ್ ದಾಸ್ತಾನು ಸ್ಥಿತಿಯನ್ನು ಪರಿಶೀಲಿಸಿದರು. ತಾಲೂಕಿನಾದ್ಯಂತ ಸಾರ್ವಜನಿಕರು, ಗ್ರಾಹಕರು ಹಾಗೂ ವಾಹನ ಮಾಲೀಕರಿಗೆ ದಿನನಿತ್ಯ ಬಳಸುವ ಗೃಹಬಳಕೆ ಮತ್ತು ವಾಣಿಜ್ಯ ಉದ್ದೇಶದ ಎಲ್.ಪಿ.ಜಿ ಗ್ಯಾಸ್, ಪೆಟ್ರೋಲ್ ಹಾಗೂ ಡೀಸೆಲ್ ಯಾವುದೇ ರೀತಿಯ ಅಭಾವ ಉಂಟಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ.**

ಸಾರ್ವಜನಿಕರು ಯಾವುದೇ ರೀತಿಯ ಆತಂಕಕ್ಕೆ ಒಳಗಾಗಬಾರದು ಎಂದು ಮನವಿ ಮಾಡಲಾಗಿದೆ. ಪರಿಶೀಲನೆ ವೇಳೆ ವಿವಿಧ ಪೆಟ್ರೋಲ್ ಬಂಕ್‌ಗಳಲ್ಲಿ ಲಭ್ಯವಿರುವ ದಾಸ್ತಾನು ವಿವರಗಳನ್ನು ಪಡೆದುಕೊಳ್ಳಲಾಯಿತು. ವಾಸವಿ ಫಿಲ್ಲಿಂಗ್ ಸ್ಟೇಷನ್‌ನಲ್ಲಿ ಎಂ.ಎಸ್ 4390 ಲೀಟರ್ ಹಾಗೂ ಎಚ್.ಎಸ್.ಡಿ 13015 ಲೀಟರ್ ದಾಸ್ತಾನು ಇರುವುದಾಗಿ ತಿಳಿಸಲಾಯಿತು. ಯಲ್ಲಾಲಿಂಗೇಶ್ವರ




ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ 6952 ಲೀಟರ್ ಹಾಗೂ ಡೀಸೆಲ್ 2083 ಲೀಟರ್ ಲಭ್ಯವಿದೆ ಎಂದು ಮಾಹಿತಿ ನೀಡಲಾಯಿತು.

ಇದೇ ವೇಳೆ ಸಂತೋಷ್ ಫಿಲ್ಲಿಂಗ್ ಸ್ಟೇಷನ್‌ನಲ್ಲಿ ಎಂ.ಎಸ್ 3000 ಲೀಟರ್ ಹಾಗೂ ಎಚ್.ಎಸ್.ಡಿ 13500 ಲೀಟರ್ ದಾಸ್ತಾನು ಇರುವುದಾಗಿ ತಿಳಿಸಲಾಗಿದೆ. ರಾಜೇಶ್ವರಿ ಫಿಲ್ಲಿಂಗ್ ಸ್ಟೇಷನ್‌ನಲ್ಲಿ ಬೆಳಿಗ್ಗೆ ವೇಳೆಗೆ ಎಂ.ಎಸ್ 5182 ಲೀಟರ್ ಹಾಗೂ ಎಚ್.ಎಸ್.ಡಿ 2080 ಲೀಟರ್ ದಾಸ್ತಾನು ಇದ್ದು, ನಂತರ 10 ಕೆಎಲ್ ಎಂ. ಎಸ್ ಹಾಗೂ 10 ಕೆಎಲ್ ಎಚ್.ಎಸ್.ಡಿ ಹೊಸ ಲೋಡ್ ಆಗಿ ಬಂದಿರುವುದಾಗಿ ತಿಳಿದುಬಂದಿದೆ. ಯಾವುದೇ ಪೆಟ್ರೋಲ್ ಬಂಕ್ ಅಥ–ವಾ ಗ್ಯಾಸ್ ಏಜೆನ್ಸಿಗಳು ``No Stock" ಎಂಬ ಬಿತ್ತಿಪತ್ರ ಅಂಟಿಸಬಾರದು.

ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ದರದಲ್ಲಿ ಪೆಟ್ರೋಲ್, ಡೀಸೆಲ್ ಅಥವಾ ಎಲ್.ಪಿ.ಜಿ ಗ್ಯಾಸ್ ಮಾರಾಟ ಮಾಡಿದಲ್ಲಿ ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಪರವಾನಗಿ ರದ್ದುಪಡಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಕೃತಕ ಅಭಾವ ಸೃಷ್ಟಿಸುವ ರೀತಿಯ ಸುಳ್ಳು ಸಂದೇಶಗಳಿಗೆ ಸಾರ್ವಜನಿಕರು ಕಿವಿಗೊಡದೇ ನಿಶ್ಚಿಂತರಾಗಿರಬೇಕು ಎಂದು ತಹಶೀಲ್ದಾರರು ಮನವಿ ಮಾಡಿದ್ದಾರೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.